Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 23-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 23-11-2020 |
| --- | --- |
| Page No | 2 |



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 23-11-2020 |
|---|---|
| Page No | 2 |

# ‘ಜಲಮೂಲ ರಕ್ಷಣೆಗೆ ನೋಡಲ್ ಸಂಸ್ಥೆ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಜಲಮೂಲಗಳ ರಕ್ಷಣೆಗೆ ನೋಡಲ್ ಸಂಸ್ಥೆಯೊಂದನ್ನು ನಿಯೋಜಿಸಬೇಕು ಎಂದು ರಾಷ್ಟ್ರೀಯ ಹಸಿರು ಪೀಠವು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ.

ಜಲಮೂಲಗಳ ರಕ್ಷಣೆಗೆ ಬೇಕಾದಷ್ಟು ಕೆಲಸಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳು ಮಾಡಿಲ್ಲ ಎಂದು ಹಸಿರು ನ್ಯಾಯಮಂಡಳಿಯ ಪ್ರಧಾನ ಪೀಠದ ಮುಖ್ಯಸ್ಥ ನ್ಯಾಯಮೂರ್ತಿ ಎ.ಕೆ. ಗೋಯಲ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜಲಮೂಲಗಳ ಮೇಲೆ ನಿಗಾ ಇರಿಸುವ ವ್ಯವಸ್ಥೆಯನ್ನು ನೋಡಲ್ ಸಂಸ್ಥೆಯು ರೂಪಿಸಬೇಕು. ಜತೆಗೆ, ದೂರು ಪರಿಹಾರ ವ್ಯವಸ್ಥೆಯನ್ನೂ ಸ್ಥಾಪಿಸಬೇಕು. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿಗೆ ನಿಯಮಿತವಾಗಿ ವರದಿ ಸಲ್ಲಿಸಬೇಕು. ಪಂಚಾಯಿತಿ ಮಟ್ಟದವರೆಗೆ ಏನೇನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ನೋಡಲ್ ಸಂಸ್ಥೆಯು ನಿರ್ದೇಶನಗಳನ್ನು ನೀಡಬೇಕು ಎಂದು ಪೀಠವು ಸೂಚಿಸಿದೆ.

| Date | 23-11-2020 |
|---|---|
| Page No | 2 |



# ರಸ್ತೆಗೆ ಅಡ್ಡಲಾಗಿ ವ್ಯಾಪಾರ ಮಾಡುತ್ತಿದ್ದವರ ತೆರವು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ವಾಹನ ಸಂಚಾರಕ್ಕೆ ಅಡ್ಡಲಾಗಿ ವ್ಯಾಪಾರ ನಡೆಸುತ್ತಿದ್ದ ಬೀದಿ ವ್ಯಾಪಾರಿಗಳನ್ನು ಬಿಬಿಎಂಪಿ ಮಾರ್ಷಲ್ ತೆರವುಗೊಳಿಸಿದ್ದಾರೆ. ಭಾರತೀನಗರ ವಾರ್ಡ್ ವ್ಯಾಪ್ತಿಯ ರಸೆಲ್ ಮಾರುಕಟ್ಟೆ ಮುಂಭಾಗದ ರಸ್ತೆಯಲ್ಲಿ ವ್ಯಾಪಾರಿಗಳು ನಡು ರಸ್ತೆಯಲ್ಲಿ ತರಕಾರಿ, ಹಣ್ಣಿನ ಬುಟ್ಟಿಗಳನ್ನು ಇಟ್ಟುಕೊಂಡು ಹಾಗೂ ವಾಹನ ನಿಲ್ಲಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿತ್ತು. ಭಾನುವಾರ ಬಿಬಿಎಂಪಿ ಮಾರ್ಷಲ್‌ಗಳು ರಸ್ತೆಯಲ್ಲಿ ವ್ಯಾಪಾರ ನಡೆಸುತ್ತಿದ್ದವರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರಲ್ಲದೇ ಇನ್ನು ಮುಂದೆ ರಸ್ತೆಯಲ್ಲಿ ವ್ಯಾಪಾರ ನಡೆಸದಂತೆ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ತಿಳಿಸಿದ್ದಾರೆ.

ಕನ್ನಡಪ್ರಭ

| Date | 23-11-2020 |
| --- | --- |
| Page No | 2 |


# ಮತದಾರರ ನೋಂದಣಿಗಾಗಿ ವಿಶೇಷ ಅಭಿಯಾನ

ಬೆಂಗಳೂರು: ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಹಾಗೂ ಪರಿಷ್ಕರಣೆಗಾಗಿ ನಗರ ಜಿಲ್ಲಾಡಳಿತವು



ಮುಂದಿನ ಭಾನುವಾರ ವಿಶೇಷ ನೋಂದಣಿ ಅಭಿಯಾನ ಹಮ್ಮಿಕೊಳ್ಳುತ್ತಿದೆ. ನ.29, ಡಿ.6 ಮತ್ತು ಡಿ.13ರಂದು ವಿಶೇಷ ನೋಂದಣಿ ಅಭಿಯಾನ ಕೈಗೊಳ್ಳಲಾಗಿದ್ದು, ಈ ವರೆಗೆ ಮತದಾನದ ಪಟ್ಟಿಗೆ ಹೆಸರು ಸೇರ್ಪಡೆ ಮಾಡದವರು ನೋಂದಣಿ ಮಾಡಿಕೊಳ್ಳುವಂತೆ ಮತದಾರರ ಪಟ್ಟಿ ಪರಿಷ್ಕರಣಾ ಉಸ್ತುವಾರಿ ತುಷಾರ್ ಗಿರಿನಾಥ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಕರಡು ಮತದಾರರ ಪಟ್ಟಿ ಪ್ರಕಟಿಸಿದ್ದು, ಆಕ್ಷೇಪಣೆ ಹಾಗೂ ಪರಿಷ್ಕರಿಸಲು ಡಿ.17ರ ವರೆಗೆ ಅವಕಾಶವಿದೆ. ನ. 25ರಂದು ಬೂತ್ ಮಟ್ಟದಲ್ಲಿ ಅಧಿಕಾರಿಗಳಿಗೆ ಮತದಾರರ ಪಟ್ಟಿ ನೋಂದಣಿ ಹಾಗೂ ಪರಿಷ್ಕರಣೆ ಕುರಿತ ತರಬೇತಿ ಆಯೋಜಿಸಬೇಕು. ತರಬೇತಿಯನ್ನು 100 ಜನರಿಗೆ ಮೀರದಂತೆ ಕೊರೋನಾ ಮುಂಜಾಗ್ರತಾ ಕ್ರಮಗಳೊಂದಿಗೆ ಅಧಿವೇಶನದಲ್ಲಿ ಆಯೋಜಿಸುವಂತೆಯೂ ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಜೆ.ಎನ್. ಶಿವಮೂರ್ತಿ, ಜಿಪಂ ಸಿಇಒ ಶಿವರಾಮೇಗೌಡ, ಅಪರ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮಿ ಸೇರಿದಂತೆ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

| Date | 23-11-2020 |
|---|---|
| Page No | 2 |

ಕೋವಿಡ್-19 | ಕೇಂದ್ರ ಸರ್ಕಾರ ಹೆಚ್ಚುವರಿ ಲಸಿಕೆ ನೀಡಿದರೆ ವೃದ್ಧರು, ದೀರ್ಘಕಾಲೀನ ರೋಗಿಗಳಿಗೆ ವಿತರಣೆ: ಬಿಬಿಎಂಪಿ

# ಮೊದಲು ವಾರಿಯರ್ಸ್‌ಗೆ, ನಂತರ ಇತರರಿಗೆ ಲಸಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೊದಲ ಹಂತದಲ್ಲಿ ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಭಾಗಿಯಾದ ಕೊರೋನಾ ವಾರಿಯರ್ಸ್‌ಗೆ ಲಸಿಕೆ ನೀಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಒಂದು ವೇಳೆ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಸರಬರಾಜು ಮಾಡಿದರೆ ವಿವಿಧ ದೀರ್ಘ ಕಾಲೀನ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಮತ್ತು ವೃದ್ಧರಿಗೆ ಲಸಿಕೆ ನೀಡಲು ಬಿಬಿಎಂಪಿ ತೀರ್ಮಾನಿಸಿದೆ.

ಕೊರೋನಾ ಸೋಂಕು ನಿರ್ವಹಣೆ ಮತ್ತು ನಿಯಂತ್ರಣ ಕಾರ್ಯಕ್ಕೆ ತೊಡಗಿಸಿಕೊಂಡ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯ ವೈದ್ಯರು, ನರ್ಸ್‌ಗಳು, ಲ್ಯಾಬ್ ಟೆಕ್ನೀಷಿಯನ್ಸ್, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಮೊದಲ ಹಂತದಲ್ಲಿ ಕೊರೋನಾ ಲಸಿಕೆ ನೀಡುವುದಕ್ಕೆ ಕೇಂದ್ರ ಸರ್ಕಾರ ತೀರ್ಮಾನಿಸಿದ್ದು, ಬಿಬಿಎಂಪಿ ಈಗಾಗಲೇ 95 ಸಾವಿರ ಕೋವಿಡ್ ವಾರಿಯರ್ಸ್ ಪಟ್ಟಿ ಸಿದ್ಧಪಡಿಸಿದೆ.

ಒಂದು ವೇಳೆ ಕೇಂದ್ರ ಸರ್ಕಾರ ಬಿಬಿಎಂಪಿ



ಸಲ್ಲಿಸಿದ ಲಸಿಕೆ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಸರಬರಾಜು ಮಾಡಿದರೆ, ಹೆಚ್ಚುವರಿ ಲಸಿಕೆಯನ್ನು ದೀರ್ಘಕಾಲದಿಂದ ಆರೋಗ್ಯದಿಂದ ಬಳಲುತ್ತಿರುವ ರೋಗಿಗಳಿಗೆ ಹಾಗೂ ವಯೋವೃದ್ಧರಿಗೆ ನೀಡುವುದಕ್ಕೆ ತೀರ್ಮಾನಿಸಿದೆ. ಒಂದು ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ನೀಡದಿದ್ದರೆ, ಎರಡನೇ ಹಂತದಲ್ಲಿ ನೀಡಲಾಗುವುದು ಎಂದು ಪಾಲಿಕೆ ಅಧಿಕಾರಿಯೊಬ್ಬರು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ್ದಾರೆ.

ಮುದ್ರಣ ಮತ್ತು ದೃಶ್ಯ ಮಾಧ್ಯಮದ ವರದಿಗಾರರು ಕೊರೋನಾ ವಾರಿಯರ್ಸ್ ಆಗಿದ್ದು, ಅವರಿಗೂ ಲಸಿಕೆ ನೀಡಲು ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

ಬಿಬಿಎಂಪಿ ನಗರದಲ್ಲಿ ಕೊರೋನಾ ಸೋಂಕಿನ ನಿಯಂತ್ರಣ ಕಾರ್ಯಕ್ಕೆ ಶ್ರಮಿಸಿದವರ ಅವರ ಹೆಸರು, ಹುದ್ದೆ, ವಿಳಾಸ, ವಯಸ್ಸು, ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಒಳಗೊಂಡ ವಿವರವಾದ 95 ಸಾವಿರ ಜನರ ಪಟ್ಟಿಯನ್ನು ಈಗಾಗಲೇ ಬಿಬಿಎಂಪಿ ಸಿದ್ಧಪಡಿಸಿದೆ. ಆದರೀಗ ಕೇಂದ್ರ ಸರ್ಕಾರ ವಾರಿಯರ್ಸ್ ಪಟ್ಟಿ ಸಲ್ಲಿಸುವ ಕೊನೆಯ ದಿನಾಂಕವನ್ನು ನ.21 ರಿಂದ ನ.30ಕ್ಕೆ ವಿಸ್ತರಣೆ ಮಾಡಿದೆ. ಹಾಗಾಗಿ, ಮತ್ತೊಂದು ಬಾರಿ ನಗರದ ಎಲ್ಲ ಖಾಸಗಿ ಮತ್ತು ಸರ್ಕಾರಿ ಆರೋಗ್ಯ ಕೇಂದ್ರದ ಮುಖ್ಯಸ್ಥರಿಗೆ ಪಟ್ಟಿಯಿಂದ ಹೊರಗೆ ಉಳಿದ ಕೊರೋನಾ ವಾರಿಯರ್ಸ್ ಹೆಸರುಗಳನ್ನು ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಇನ್ನಷ್ಟು ಕೊರೋನಾ ವಾರಿಯರ್ಸ್ ಸೇರ್ಪಡೆಯಾಗುವ ಸಾಧ್ಯತೆ ಇದ್ದು, ಒಂದು ಲಕ್ಷ ದಾಟುವ ನಿರೀಕ್ಷೆ ಇದೆ.

## ನಗರದಲ್ಲಿ 41 ಲಕ್ಷ ಮಂದಿಗೆ ಕೊರೋನಾ ಸೋಂಕು ಪರೀಕ್ಷೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಈವರೆಗೆ ಒಂದು ಕೋಟಿ ಕೊರೋನಾ ಸೋಂಕು ಪರೀಕ್ಷೆ ನಡೆಸಲಾಗಿದ್ದು ಈ ಪೈಕಿ 41 ಲಕ್ಷ ಪರೀಕ್ಷೆಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾಡಲಾಗಿದೆ. ನಗರದಲ್ಲಿ ಮಾ.8 ರಿಂದ ಜೂ.26 ರವರೆಗೆ ಕೇವಲ ಒಂದು ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಗಿತ್ತು. ಸೆ.4ರ ವೇಳೆಗೆ 10 ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಯಿತು. ಅ.8ಕ್ಕೆ 20 ಲಕ್ಷ, ಅ.30ಕ್ಕೆ 30 ಲಕ್ಷ ಹಾಗೂ ನ.20ಕ್ಕೆ 40 ಲಕ್ಷ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಅ.30 ರಿಂದ ನ.20ರವರೆಗೆ 10 ಲಕ್ಷ ಕೋವಿಡ್ ಪರೀಕ್ಷೆ ನಡೆಸಲಾಗಿದೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

**1039 ಹೊಸ ಕೇಸ್:** ಇನ್ನು ನಗರದಲ್ಲಿ ಭಾನುವಾರ 1,039 ಹೊಸ ಕೊರೋನಾ ಸೋಂಕು ಪ್ರಕರಣ ಪತ್ತೆಯಾಗಿದ್ದು, 669 ಮಂದಿ ಸೋಂಕಿನಿಂದ ಗುಣಮುಖರಾಗಿದ್ದಾರೆ. 10 ಮಂದಿ ಮೃತಪಟ್ಟಿದ್ದಾರೆ.

ನಗರದಲ್ಲಿ ಈವರೆಗಿನ ಒಟ್ಟು ಸೋಂಕಿತರ ಸಂಖ್ಯೆ 3,63,665ಕ್ಕೆ ತಲುಪಿದ್ದರೆ, ಗುಣಮುಖರ ಸಂಖ್ಯೆ 3,41,424ಕ್ಕೆ ಏರಿಕೆಯಾಗಿದೆ. ಸದ್ಯ ನಗರದಲ್ಲಿ 18,172 ಸಕ್ರಿಯ ಪ್ರಕರಣಗಳಿದ್ದು, 237 ಮಂದಿ ನಗರದ ವಿವಿಧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

10 ಜನರು ಸಾವನ್ನಪ್ಪಿದ್ದು, ಈವರೆಗೆ 4,068 ಜನರು ಮೃತಪಟ್ಟಿದ್ದಾರೆ.

| Date | 23-11-2020 |
| --- | --- |
| Page No | 4 |

ನಿರ್ದೇಶನ | ಪಾಲಿಕೆ ಆಡಳಿತಾಧಿಕಾರಿಯಿಂದ ಜಲಮಂಡಳಿಗೆ ಸೂಚನೆ

# ‘ಕೆರೆಯ ಬಳಿ ನೀರು ಸಂಸ್ಕರಣಾ ಘಟಕ ಸ್ಥಾಪಿಸಿ’

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿರುವ ಕೆರೆಗಳಿಗೆ ಕಲುಷಿತ ನೀರು ಸೇರದಂತೆ ಎಲ್ಲ ಕೆರೆಗಳ ಬಳಿ ಒಂದು ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಅಳವಡಿಸುವಂತೆ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಅವರು ಬೆಂಗಳೂರು ಜಲ ಮಂಡಳಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಕೈಕೊಂಡ್ರಹಳ್ಳಿ ಕೆರೆ, ಇಬ್ಬಲೂರು ಕೆರೆ ಪರಿಶೀಲನೆ ನಡೆಸಿದ ಅವರು, ಕೈಕೊಂಡ್ರಹಳ್ಳಿ ಕೆರೆಗೆ ತ್ಯಾಜ್ಯ ನೀರು ಹರಿಯುತ್ತಿರುವುದನ್ನು ಕಂಡ ಜಲಮಂಡಳಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ತ್ಯಾಜ್ಯ ನೀರು ಕೆರೆ ಸೇರಿದಂತೆ ಕ್ರಮ ಕೈಗೊಳ್ಳಿ, ಪ್ರತಿ ಕೆರೆ ಬಳಿ ಒಂದು ದಶಲಕ್ಷ ಲೀಟರ್ (ಒಂದು ಎಂಎಲ್‌ಡಿ) ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಅಳವಡಿಸಬೇಕು. ಸಂಸ್ಕರಣೆಯಾದ ನೀರು ಕೆರೆಗೆ ಸೇರಬೇಕು ಎಂದು ತಾಕೀತು ಮಾಡಿದರು.

ಕೆರೆಗಳು ಮಲಿನವಾಗದಂತೆ ಕ್ರಮವಹಿಸುವ ನಿಟ್ಟಿನಲ್ಲಿ ಜಲಮಂಡಳಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ, ಆ ಕೆರೆಯ ಅಚ್ಚುಕಟ್ಟು



ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತಾ ಅವರು ಇಬ್ಬಲೂರು ಕೆರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಪ್ರದೇಶದ ಅಧ್ಯಯನ ನಡೆಸಿ, ಸುತ್ತಮುತ್ತಲಿನ ಮನೆಗಳಿಂದ ಹೊರಬರುವ ತ್ಯಾಜ್ಯ ನೀರಿನ ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಒಂದೇ ಮಾದರಿಯ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ, ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಲು ಮತ್ತು ಈ ಬಗ್ಗೆ ವಿಶೇಷ ಆಯುಕ್ತರಿಗೆ (ಯೋಜನೆ) ಮೇಲ್ವಿಚಾರಣೆ ಮಾಡಲು ಸೂಚಿಸಿದರು. ನಗರದ ಬಹುತೇಕ ಕಡೆ ಒಳಚರಂಡಿ ನೀರು ಮಳೆ ನೀರುಗಾಲುವೆಗೆ ಸೇರ್ಪಡೆಯಾಗುವುದನ್ನು ತಡೆಯಲು ಕ್ರಮ ತೆಗೆದುಕೊಳ್ಳಿ ಎಂದು ಆದೇಶಿಸಿದರು.

ಜಲಮಂಡಳಿಯಿಂದ ನಡೆಯುತ್ತಿರುವ ಕಾಮಗಾರಿಯಿಂದ ಬಹುತೇಕ ರಸ್ತೆಗಳು ಗುಂಡಿಗಳಾಗಿವೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದು ತ್ವರಿತವಾಗಿ ಕಾಮಗಾರಿ ಮುಗಿಸುವುದಲ್ಲದೆ ಕಾಮಗಾರಿ ಮುಗಿದ ನಂತರ ರಸ್ತೆ ದುರಸ್ತಿ ಮಾಡಬೇಕು ಎಂದು ಸೂಚನೆ ನೀಡಿದರು.

**ತ್ಯಾಜ್ಯ ಸಂಗ್ರಹಣೆ ಪರಿಶೀಲನೆ:** ಬೊಮ್ಮನಹಳ್ಳಿ ವಲಯದ ಸೋಮಸುಂದರ ಪಾಳ್ಯದಲ್ಲಿ ನಿಯಮಗಳ ಅನುಸಾರ ಮನೆ ಮನೆಯಿಂದ ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಣೆ ಮಾಡುವುದನ್ನು ಪರಿಶೀಲನೆ ನಡೆಸಿದರು.

ವಿಶೇಷ ಆಯುಕ್ತರಾದ ರಂದೀಪ್, ಮನೋಜ್ ಜೈನ್, ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಂ.ಆರ್.ವೆಂಕಟೇಶ್, ಜಂಟಿ ಆಯುಕ್ತ ವೆಂಕಟಾಚಲಪತಿ, ಕೆರೆ ವಿಭಾಗದ ಮುಖ್ಯ ಅಭಿಯಂತರ ಬಿ.ಟಿ.ಮೋಹನ್ ಕೃಷ್ಣ, ರಾಜಕಾಲುವೆ ವಿಭಾಗದ ಮುಖ್ಯ ಅಭಿಯಂತರ ವಿಶ್ವನಾಥ್, ಯೋಜನೆ-ಕೇಂದ್ರದ ಮುಖ್ಯ ಅಭಿಯಂತರ ರಮೇಶ್, ಮುಖ್ಯ ಅಭಿಯಂತರರಾದ ಪರಮೇಶ್ವರ್, ಸಿದ್ದೇಗೌಡ, ಜಲ ಮಂಡಳಿ ಮುಖ್ಯ ಅಭಿಯಂತರರಾದ ಕುಮಾರನಾಯಕ್ ಇದ್ದರು.

| Date | 23-11-2020 |
|---|---|
| Page No | 8 |

ಕೆಂಪೇಗೌಡ ಬಡಾವಣೆಯ ವೆಚ್ಚದ ವಿವರ ಬಹಿರಂಗ | ಬಿಡಿಎಯಿಂದ 'ರೇರಾ'ಗೆ ಪ್ರಮಾಣಪತ್ರ ಸಲ್ಲಿಕೆ

# 1200 ಕೋಟಿ ಖರ್ಚಾದರೂ ಮೂಲಸೌಕರ್ಯವಿಲ್ಲ

■ **ಆರ್. ತುಳಸಿಕುಮಾರ್** ಬೆಂಗಳೂರು
tulasi.kumar@timesgroup.com

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಿಸಲು ಈವರೆಗೆ 1,200 ಕೋಟಿ ರೂ. ವೆಚ್ಚ ಮಾಡಿದ್ದರೂ, ಪೂರ್ಣ ಪ್ರಮಾಣದ ಮೂಲಸೌಕರ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನಷ್ಟು ಹಣ ಬೇಕಿದ್ದು, ಸಂಪನ್ಮೂಲ ಸಂಗ್ರಹಿಸಲು ಪ್ರಾಧಿಕಾರಕ್ಕೆ ಸವಾಲು ಎದುರಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ರಸ್ತೆ ಸೇರಿದಂತೆ ನಾನಾ ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಗಡುವಿನೊಳಗೆ ಕಾಮಗಾರಿ ಪೂರ್ಣಗೊಳಿಸಲು ಪ್ರಾಧಿಕಾರ ಇಚ್ಛಾಶಕ್ತಿ ಪ್ರದರ್ಶಿಸದ ಕಾರಣ ನಿವೇಶನ ದಾರರು ಸ್ವಂತ ಸೂರು ನಿರ್ಮಿಸಿಕೊಳ್ಳಲಾಗದೆ ಪರಿತಪಿಸುತ್ತಿದ್ದಾರೆ. ಇತ್ತ ದಶಕದಿಂದ ಲೇಔಟ್‌ಗಾಗಿ ಮಾಡಿದ್ದ ವೆಚ್ಚದ ವಿವರಗಳನ್ನು ಬಹಿರಂಗಪಡಿಸಲು ಹಿಂದೇಟು ಹಾಕಿದ್ದ ಬಿಡಿಎ, ಈಗ 'ರೇರಾ'ಗೆ ಆದಾಯ-ವೆಚ್ಚದ ಮಾಹಿತಿಯನ್ನು ಒದಗಿಸಿದೆ.

ದಶಕದ ಹಿಂದೆ ಕೆಂಪೇಗೌಡ ಬಡಾವಣೆ ನಿರ್ಮಿಸಲು ಬಿಡಿಎ ಮುಂದಾಗಿತ್ತು. 2015-16ನೇ ಸಾಲಿನಿಂದೀಚೆಗೆ ಭೂಸ್ವಾಧೀನ, ಪರಿಹಾರ ವಿತರಣೆ, ಸಿವಿಲ್ ಕಾಮಗಾರಿ ಹಾಗೂ ಆಡಳಿತಾತ್ಮಕ ವೆಚ್ಚಕ್ಕಾಗಿ ಕೋಟ್ಯಂತರ ರೂ. ವ್ಯಯಿಸಲಾಗಿದೆ. ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ ಠೇವಣಿ ಹಣ ಹಾಗೂ ಸೈಟ್ ಮೊತ್ತವನ್ನು ಪಡೆದಿದ್ದರೂ, ಮೂಲಸೌಕರ್ಯ ಒದಗಿಸದ ಕಾರಣ ಬಡಾವಣೆ ಕಳಾಹೀನವಾಗಿದೆ. ಸೈಟ್‌ದಾರರು 'ರೇರಾ' ಮೊರೆ ಹೋದ ವೇಳೆ ಬಡಾವಣೆ ನಿರ್ಮಾಣ, ಸೈಟ್ ಹಂಚಿಕೆ, ಆದಾಯ-ವೆಚ್ಚದ ವಿವರಗಳನ್ನು ಬಿಡಿಎ ಪ್ರಮಾಣಪತ್ರದಲ್ಲಿ ಸಲ್ಲಿಸಿದೆ.

**ಸಿವಿಲ್ ಕಾಮಗಾರಿಗೆ ಅಧಿಕ ಹಣ ವೆಚ್ಚ**

ನೈಸ್ ರಸ್ತೆಯ ಆಚೆಯಿರುವ ಮಾಗಡಿ ರಸ್ತೆ-ತುಮಕೂರು ರಸ್ತೆ ಮಧ್ಯೆ ಸಿಗುವ 12 ಹಳ್ಳಿಗಳಿಗೆ ಸೇರಿದ 4,027 ಎಕರೆ ಜಾಗದಲ್ಲಿ ಲೇಔಟ್ ನಿರ್ಮಾಣವಾಗುತ್ತಿದೆ. ಒಟ್ಟು 40 ಸಾವಿರ ಸೈಟ್‌ಗಳ ರಚನೆಯಲ್ಲಿ ಅರ್ಧದಷ್ಟು ನಾಗರಿಕರಿಗೆ ವಿತರಿಸಲು ಗುರಿ ಹೊಂದಲಾಗಿದೆ. ಈವರೆಗೆ ಎರಡು ಹಂತಗಳಲ್ಲಿ ಹತ್ತು ಸಾವಿರ ಸೈಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ರಸ್ತೆ, ಕುಡಿಯುವ ನೀರು, ಒಳಚರಂಡಿ ಇತ್ಯಾದಿ ಸಿವಿಲ್ ಕಾಮಗಾರಿ ಕೈಗೊಳ್ಳಲಾಗಿದೆ. ಬಡಾವಣೆ ನಿರ್ಮಿಸಲು ಈವರೆಗೆ ಒಟ್ಟು 1940.59 ಕೋಟಿ ರೂ. ಸಂಪನ್ಮೂಲ ಸಂಗ್ರಹಿಸಲಾಗಿದೆ. ಈ ಮೊತ್ತದಲ್ಲಿ 1889.52 ಕೋಟಿ ರೂ. ಖರ್ಚಾಗಿದ್ದು, ಸಿವಿಲ್ ಕೆಲಸಗಳಿಗೆ 1205.99 ಕೋಟಿ ರೂ. ಹಾಗೂ ಉಳಿದ 683.53 ಕೋಟಿ ರೂ. ಹಣ ಭೂ ಪರಿಹಾರಕ್ಕೆ ವಿನಿಯೋಗಿಸಲಾಗಿದೆ ಎಂದು ಬಿಡಿಎ ಲಿಖಿತವಾಗಿ 'ರೇರಾ'ಗೆ ಸಲ್ಲಿಸಿದೆ.

ಇಷ್ಟು ದೊಡ್ಡ ಮೊತ್ತವನ್ನು ವ್ಯಯಿಸಿದ್ದರೂ, ಈವರೆಗೆ ಬಡಾವಣೆಯಲ್ಲಿ ಶೇ.40ಕ್ಕಿಂತ ಹೆಚ್ಚು ಕಾಮಗಾರಿ ಪೂರ್ಣಗೊಂಡಿಲ್ಲ. 2019ರ ಅಂತ್ಯದಲ್ಲಿ ಕೊನೆಗೊಳ್ಳಬೇಕಿದ್ದ ಕಾಮಗಾರಿಯ ಗಡುವನ್ನು ಈಗ 2021ರ ಅಂತ್ಯಕ್ಕೆ ವಿಸ್ತರಿಸಲು 'ರೇರಾ' ಒಪ್ಪಿಗೆ ನೀಡಿದೆ. ಈ ಗಡುವಿನೊಳಗೆ ಇನ್ನಷ್ಟು ಸಂಪನ್ಮೂಲ ಸಂಗ್ರಹಿಸಿ ಬಾಕಿ ಕಾಮಗಾರಿ ಪೂರ್ಣಗೊಳಿಸಲು ಪ್ರಾಧಿಕಾರಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಮೂಡಿದೆ.

ಒಟ್ಟು ಸಂಪನ್ಮೂಲ ಸಂಗ್ರಹ **1940.59** ಕೋಟಿ ರೂ.

ಸಿವಿಲ್ ಕೆಲಸಗಳಿಗೆ **1205.99** ಕೋಟಿ ಖರ್ಚು

**683.53** ಕೋಟಿ ರೂ. ಭೂ ಪರಿಹಾರಕ್ಕೆ ವಿನಿಯೋಗ



ಕೆಂಪೇಗೌಡ ಬಡಾವಣೆಯಲ್ಲಿ ಪ್ರಗತಿಯಲ್ಲಿರುವ ಚರಂಡಿ ಕಾಮಗಾರಿ.

### ಹಣ ಬಳಕೆಗೆ ಸರಕಾರಕ್ಕೆ ಮೊರೆ?

ಬಿಡಿಎ ಕೆಲ ತಿಂಗಳಿನಿಂದ ಕಾರ್ನರ್ ಸೈಟ್‌ಗಳನ್ನು ಹರಾಜು ಮಾಡಿ ಹಣ ಸಂಗ್ರಹಿಸುತ್ತಿದೆ. ಈ ಮೊತ್ತವನ್ನು ಪ್ರತ್ಯೇಕ ನಿಧಿಯಾಗಿಸುವಂತೆ ಹಿಂದೆಯೇ ಸರಕಾರ ಸೂಚಿಸಿತ್ತು. ಕೋವಿಡ್-19 ಹಿನ್ನೆಲೆಯಲ್ಲಿ ಈ ನಿಧಿಯನ್ನು ಬಳಸದೆ ಸರಕಾರದ ಬೊಕ್ಕಸಕ್ಕೆ ನೀಡಬೇಕಿದೆ. ಸದ್ಯ ಕೆಂಪೇಗೌಡ ಬಡಾವಣೆಗೆ ಹಣದ ಕೊರತೆ ಉಂಟಾಗಿದ್ದು, ಕಾರ್ನರ್ ಸೈಟ್ ನಿಧಿಯಿಂದ ಸ್ವಲ್ಪ ಭಾಗವನ್ನು ಬಳಸಿಕೊಳ್ಳಲು ಪ್ರಾಧಿಕಾರವು ಸರಕಾರದ ಮೊರೆ ಹೋಗಿದೆ.

**ಬ್ಯಾಂಕ್ ಸಾಲ ಮಾಡಿ ಸೈಟ್ ಮೊತ್ತ ಪಾವತಿಸಿರುವ ನಾವು ಈಗ ಮನೆ ನಿರ್ಮಿಸಲಾಗದೆ ಬ್ಯಾಂಕ್‌ಗೆ ವೃಥಾ ಬಡ್ಡಿ ಕಟ್ಟುತ್ತಿದ್ದೇವೆ. 'ರೇರಾ' ಚಾಟಿ ಬೀಸಿದ ಬಳಿಕವೂ ಬಿಡಿಎ ಕಾಮಗಾರಿಗೆ ವೇಗ ನೀಡದಿರುವುದು ಸೈಟ್‌ದಾರರಲ್ಲಿ ಆತಂಕ ಮೂಡಿಸಿದೆ.**

\- **ಸೂರ್ಯಕಿರಣ್** ಪದಾಧಿಕಾರಿ, ಎನ್‌ಪಿಕೆಎಲ್ ಓಪನ್ ಫೋರಂ

**ಬಾಕಿ ಕಾಮಗಾರಿಗಳಿಗೆ ಹಣ ಹೊಂದಿಸಲು ಹರಸಾಹಸ**

**ಗಡುವಿನೊಳಗೆ ಮೂಲ ಸೌಕರ್ಯ ಕಲ್ಪಿಸಲು ಸವಾಲು**

### ಬಡಾವಣೆ ನಿರ್ಮಾಣದ ವರ್ಷವಾರು ಆದಾಯ/ವೆಚ್ಚದ ವಿವರ

| ಆರ್ಥಿಕ ವರ್ಷ | ಆದಾಯ | ವೆಚ್ಚ |
|---|---|---|
| 2011-12 | 0** | 66.26** |
| 2012-13 | 0 | 291.90 |
| 2013-14 | 0 | 144.36 |
| 2014-15 | 0 | 61.96 |
| 2015-16 | 175.85 | 229.36 |
| 2016-17 | 289.56 | 126.26 |
| 2017-18 | 413.33 | 211.01 |
| 2018-19 | 831.74 | 409.48 |
| 2019-20 | 219.00 | 270.57 |
| 2020-21* | 11.11 | 78.35 |
| ಒಟ್ಟು | 1940.59 | 1889.52 |

* ಆಗಸ್ಟ್ ತಿಂಗಳಾಂತ್ಯದವರೆಗೆ  ** ಕೋಟಿ ರೂ.ಗಳಲ್ಲಿ

### ಗುತ್ತಿಗೆದಾರರಿಂದ ಕೆಲಸ ವಿಳಂಬ: ಆಯುಕ್ತರ ಗರಂ

ಲಾಕ್‌ಡೌನ್ ವೇಳೆ ಸ್ಥಗಿತಗೊಂಡಿದ್ದ ಮೂಲಸೌಕರ್ಯ ಕಾಮಗಾರಿ ಕಳೆದೆರಡು ತಿಂಗಳಿನಿಂದ ಪುನರಾರಂಭಗೊಂಡಿದೆ. ಆದರೂ, ನಿರೀಕ್ಷಿತ ಮಟ್ಟದಲ್ಲಿ ಕೆಲಸ ಆಗುತ್ತಿಲ್ಲ. ಗುತ್ತಿಗೆದಾರರಿಗೆ ದೊಡ್ಡ ಮೊತ್ತದ ಬಿಲ್ ಉಳಿಸಿಕೊಂಡಿದ್ದು, ಬೇಕೆಂದೇ ಕೆಲಸ ನಿಧಾನಗೊಳಿಸುತ್ತಿದ್ದಾರೆ. ಈ ಮಾಹಿತಿ ಪಡೆದ ಬಿಡಿಎ ಆಯುಕ್ತ ಡಾ. ಮಹಾದೇವ್ ಅವರು ಶನಿವಾರ ಬಡಾವಣೆಗೆ ಭೇಟಿ ನೀಡಿ ಕಾಮಗಾರಿಗಳ ಪರಿಶೀಲನೆ ನಡೆಸಿದರು. ಬಾಕಿ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ತಾಕೀತು ಮಾಡಿದ್ದು, ಬಾಕಿ ಬಿಲ್ ಪಾವತಿಸುವ ವಾಗ್ದಾನ ಸಿಗದ ಕಾರಣ ಗುತ್ತಿಗೆದಾರರು ಸ್ಪಂದಿಸುವರೇ ಎಂಬ ಪ್ರಶ್ನೆ ಮೂಡಿದೆ.

VK
ವಿಜಯ ಕರ್ನಾಟಕ

| Date | 23-11-2020 |
| --- | --- |
| Page No | 8 |

ಪದ್ಮನಾಭನಗರ ಕ್ಷೇತ್ರದಲ್ಲಿ ಸ್ವಚ್ಛತಾ ಆಂದೋಲನ । ಸಚಿವ ಆರ್. ಅಶೋಕ್ ಸೇರಿ 1000 ಮಂದಿ ಭಾಗಿ

# 8 ಗಂಟೆಯಲ್ಲಿ 800 ಟನ್ ತ್ಯಾಜ್ಯ ಸಂಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭಾನುವಾರ ನಡೆದ ಬೃಹತ್ ಮಟ್ಟದ ಸ್ವಚ್ಛತಾ ಆಂದೋಲನದ ವೇಳೆ ಎಂಟೇ ಗಂಟೆಗಳಲ್ಲಿ ಬರೋಬ್ಬರಿ 800 ಟನ್ ಪ್ರಮಾಣದಷ್ಟು ತ್ಯಾಜ್ಯ ಸಂಗ್ರಹಿಸಿ ದಾಖಲೆ ಮಾಡಲಾಗಿದೆ.

**ಸಂಘಟನೆಗಳ ಪದಾಧಿಕಾರಿಗಳು, ಸರಕಾರಿ ನೌಕರರ ಸಾಥ್**

ಇದೇ ಮೊದಲ ಬಾರಿಗೆ ಕ್ಷೇತ್ರದ ಎಲ್ಲಾ ಎಂಟೂ ವಾರ್ಡ್‌ಗಳಲ್ಲಿ ಏಕಕಾಲದಲ್ಲಿ ನಡೆದ ಸ್ವಚ್ಛತಾ ಕಾರ್ಯದಲ್ಲಿ ಸ್ವತಃ ಕಂದಾಯ ಸಚಿವ ಆರ್.ಅಶೋಕ್ ಅವರು ರಸ್ತೆಬದಿಯ ಪ್ಲಾಸ್ಟಿಕ್ ತ್ಯಾಜ್ಯ, ಮರದ ತುಂಡು ಸಹಿತ ನಾನಾ ಕಸಗಳನ್ನು ಹೆಕ್ಕಿ ತೆಗೆದರು. ಸ್ಥಳೀಯ ಶಾಸಕರೂ ಆಗಿರುವ ಅಶೋಕ್‌ಗೆ ನಾನಾ ವಾರ್ಡ್‌ಗಳ ಮಾಜಿ ಕಾರ್ಪೊರೇಟರ್‌ಗಳು, ನಾಗರಿಕ ಸಂಘಟನೆಗಳು ಹಾಗೂ ಸಾರ್ವಜನಿಕರು ಸಾಥ್ ನೀಡಿದರು. ಅದರಲ್ಲೂ ಪಾಲಿಕೆಯ ನಾನಾ ವಿಭಾಗಗಳ ಅಧಿಕಾರಿ/ಸಿಬ್ಬಂದಿಗಳು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ನಾನಾ ಬಡಾವಣೆಗಳಲ್ಲಿ ಕಸ ಹೆಕ್ಕಿ ಒಂದೆಡೆ ಸಂಗ್ರಹಿಸಿದ್ದಾರೆ.

ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಡೆದ ಸ್ವಚ್ಛತಾ ಕಾರ್ಯಕ್ಕೆ ನಾಗರಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಯಿತು. ಸ್ವಚ್ಛತಾ ಕಾರ್ಯಕರ್ತರು ಬಡಾವಣೆಗೆ ಧಾವಿಸಿ ಬಂದಾಗ ಸ್ಥಳೀಯರು ಕೂಡ ರಸ್ತೆ ಬದಿ ಕೆಲ ಕಾಲ ಕಸ ಸಂಗ್ರಹಿಸಿ ಆಂದೋಲನವನ್ನು ಬೆಂಬಲಿಸಿದರು. ಅನೇಕ ಬಡಾವಣೆಗಳಲ್ಲಿ ಹಲವು ದಿನಗಳಿಂದ ರಸ್ತೆಬದಿ ಮರದ ಕೊಂಬೆ, ಕಟ್ಟಡ ತ್ಯಾಜ್ಯ, ಬೇಡದ ವಸ್ತುಗಳು ಬಿದ್ದಿದ್ದವು. ಕೆಲ ಸ್ಥಳಗಳಲ್ಲಿ ಕಸವನ್ನು ಹೊರಸಾಗಿಸಲು ಸಾಧ್ಯವಾಗದೆ ಜನರೇ ರಸ್ತೆಬದಿ ಬಿಸಾಡಿದ್ದರು. ಇದನ್ನು ಕಂಡ ಸಚಿವರು, ಇನ್ನು ಮುಂದೆ ಬೇಕಾಬಿಟ್ಟಿಯಾಗಿ ಕಸ ವಿಲೇ ಮಾಡದೆ ಪಾಲಿಕೆಯ ವಾಹನಗಳಿಗೆ ಮಾತ್ರ ತ್ಯಾಜ್ಯವನ್ನು ಕೊಡುವಂತೆ ವಿನಂತಿಸಿದರು.

ಹೊಸಕೆರೆಹಳ್ಳಿ, ಕರಿಸಂದ್ರ, ಯಡಿಯೂರು, ಬನಶಂಕರಿ, ಕುಮಾರಸ್ವಾಮಿ ಲೇಔಟ್ ಸಹಿತ ಎಂಟೂ ವಾರ್ಡ್ ವ್ಯಾಪ್ತಿಯಲ್ಲಿ 50ಕ್ಕೂ ಹೆಚ್ಚು ತಂಡಗಳನ್ನು ರಚಿಸಲಾಗಿತ್ತು. ಪ್ರತಿ ತಂಡಕ್ಕೂ ಪ್ರಮುಖರೊಬ್ಬರನ್ನು ನಿಯೋಜಿಸಿದ್ದ ಪರಿಣಾಮ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಸಂಗ್ರಹವಾಗಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು ಎಂದು ಮಾಜಿ ಮೇಯರ್ ಎಲ್.ಶ್ರೀನಿವಾಸ್ ಪ್ರತಿಕ್ರಿಯಿಸಿದರು.

ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಎ.ಎಚ್.ಬಸವರಾಜು, ಬಿಜೆಪಿ ಮುಖಂಡರಾದ ಆಂಜಿನಪ್ಪ, ಪಕ್ಷದ ಸ್ಥಳೀಯ ಘಟಕದ ನಾನಾ ವಿಭಾಗಗಳ ಕಾರ್ಯಕರ್ತರು ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಭಾಗಿಯಾಗಿದ್ದರು. ಪಾಲಿಕೆಯ ಎಂಜಿನಿಯರಿಂಗ್, ಅರಣ್ಯ, ತೋಟಗಾರಿಕೆ, ಘನತ್ಯಾಜ್ಯ, ರಸ್ತೆ-ಮೂಲಸೌಕರ್ಯ, ಮಳೆನೀರು ಗಾಲುವೆ ವಿಭಾಗಗಳ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು.





ಪದ್ಮನಾಭನಗರ ಕ್ಷೇತ್ರವನ್ನು ಸ್ವಚ್ಛ ಪ್ರದೇಶವಾಗಿ ಮಾರ್ಪಡಿಸುವ ಉದ್ದೇಶದಿಂದ ಸ್ವಚ್ಛತಾ ಆಂದೋಲನ ಕೈಗೊಳ್ಳಲಾಗಿದೆ. ಸ್ಥಳೀಯ ನಾಗರಿಕರು, ಪಾಲಿಕೆ ಸಹಿತ ಸರಕಾರಿ ಸಂಸ್ಥೆಗಳ ಅಧಿಕಾರಿ / ಸಿಬ್ಬಂದಿಗಳು ಉತ್ಸಾಹದಿಂದ ಭಾಗಿಯಾಗಿದ್ದಾರೆ. ಇದೇ ಮಾದರಿಯಲ್ಲಿ ಇತರ ಮತಕ್ಷೇತ್ರಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಲ್ಲಿ ಬೆಂಗಳೂರು ನಗರ ಸ್ವಚ್ಛವಾಗುವುದರಲ್ಲಿ ಸಂಶಯ ಇಲ್ಲ.

**- ಆರ್.ಅಶೋಕ್**
ಕಂದಾಯ ಸಚಿವ

VK ವಿಜಯ ಕರ್ನಾಟಕ

| Date | 23-11-2020 |
|---|---|
| Page No | 10 |

## ರಾಜ್ಯಗಳಿಗೆ ಎನ್‌ಜಿಟಿ ಕಟ್ಟುನಿಟ್ಟಿನ ನಿರ್ದೇಶನ

# ಕೆರೆಗಳ ಸಂರಕ್ಷಣೆಗೆ ಸಮಿತಿ

**ಹೊಸದಿಲ್ಲಿ:** ಕೆರೆಗಳು ಮತ್ತು ಜಲ ಮೂಲಗಳ ಸಂರಕ್ಷಣೆಗೆ ರಾಜ್ಯ ಸರಕಾರಗಳು ಸಮರ್ಪಕ ಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ(ಎನ್‌ಜಿಟಿ) ಕಿಡಿ ಕಾರಿದೆ. ಜಲಮೂಲಗಳ ರಕ್ಷಣೆಗೆ ಕ್ರಮ ಕೈಗೊಳ್ಳಲು ರಾಜ್ಯ ಸರಕಾರಗಳ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ವಿಶೇಷ ಸಮಿತಿಯೊಂದನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ.

ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಮೇಲ್ವಿಚಾರಣೆಯಲ್ಲಿ ಈ ವರ್ಷಾಂತ್ಯದೊಳಗೆ ಸಮಿತಿಯ ಸಭೆ ನಡೆಸಬೇಕು. ಸಭೆಯಲ್ಲಿ ರಾಜ್ಯಗಳಲ್ಲಿರುವ ಪ್ರಸ್ತುತ ಜಲಮೂಲಗಳ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಿಸಬೇಕು. ಹಾಗೆಯೇ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕ್ರಿಯಾ ಯೋಜನೆ ರೂಪಿಸಬೇಕು ಎಂದು ಪೀಠ ತಿಳಿಸಿದೆ. ಮುಂದಿನ ವರ್ಷದ ಜನವರಿ 31ರೊಳಗೆ ಈ ಸಮಿತಿಯ ಮೊದಲ ಸಭೆ ನಡೆಸುವಂತೆ ನ್ಯಾಯ ಮಂಡಳಿ ಸೂಚಿಸಿದೆ.

ರಾಜ್ಯದ ಜಲಮೂಲಗಳ ಮೇಲೆ ನಿಗಾವಹಿಸುವ ಸಂಬಂಧ ವರ್ಷಕ್ಕೆ ಮೂರು ಬಾರಿಯಾದರೂ ಎಲ್ಲ ರಾಜ್ಯಗಳಲ್ಲೂ ನಿಯಮಿತವಾಗಿ ಸಭೆ ನಡೆಸುವಂತೆ ಕಲುಷಿತ ನದಿಗಳ ಪುನಶ್ಚೇತನಕ್ಕಾಗಿ ರಚಿಸಲಾಗಿರುವ 'ಕೇಂದ್ರೀಯ ಉಸ್ತುವಾರಿ ಸಮಿತಿ'ಗೆ ಎನ್‌ಜಿಟಿ ಕೇಳಿದೆ.

"ಜಲಮೂಲಗಳ ರಕ್ಷಣೆಗಾಗಿ ಇಲ್ಲಿವರೆಗೆ ಕೈಗೊಂಡಿರುವ ಕ್ರಮಗಳು ಸಮರ್ಪಕವಾಗಿಲ್ಲ.. ಜಲಮೂಲಗಳನ್ನು ರಕ್ಷಿಸುವುದರಿಂದ ನದಿ ಸೌಂದರ್ಯ ಹೆಚ್ಚುವ ಜತೆಗೆ, ವಾತಾವರಣ ಉತ್ತಮವಾಗುತ್ತದೆ. ಕುಡಿಯಲು ಶುದ್ಧ ನೀರು ಲಭ್ಯವಾಗುತ್ತದೆ. ಜಲಚರಗಳು ವೃದ್ಧಿಯಾಗುತ್ತವೆ, ಅಂತರ್ಜಲ ಮರು ಪೂರಣವಾಗುತ್ತದೆ ಮಾತ್ರವಲ್ಲ, ನದಿಗಳ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ವಾಗುತ್ತದೆ," ಎಂದು ಪೀಠ ಅಭಿಪ್ರಾಯಪಟ್ಟಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 23-11-2020 |
| --- | --- |
| Page No | 1 |

# ಜನರಿಗೆ ಹೊರೆಯಿಲ್ಲ, ಆದಾಯಕ್ಕೂ ಬರವಿಲ್ಲ

## ಸಂಪನ್ಮೂಲಕ್ಕೆ ಹೊಸ ಮಾರ್ಗ | ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಘೋಷಣೆ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ರಾಜಧಾನಿಯ ಆಡಳಿತವನ್ನು ಸ್ವಾವಲಂಬಿಯಾಗಿಸುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಜನರ ಜೇಬಿಗೆ ಹೊರೆಯಿಲ್ಲದಂತೆ ನಿಭಾಯಿಸುವ ಮಾರ್ಗಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಂಡುಕೊಂಡಿರುವುದಾಗಿ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದರು.

ಶನಿವಾರ **ವಿಜಯವಾಣಿ** ಹಾಗೂ **ದಿಗ್ವಿಜಯ 24X7 ನ್ಯೂಸ್** ಆಯೋಜಿಸಿದ್ದ ಫೋನ್ ಇನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಆಶಯಗಳನ್ನು ತೆರೆದಿಟ್ಟರು.

**ಸಿಎಂ ಆಶಯ:** ತ್ಯಾಜ್ಯ ಸಂಗ್ರಹ ಸೆಸ್ ಹೆಚ್ಚಿಸದೆ ಇತರ ಸೆಸ್‌ಗಳ ಜತೆಗೆ ಹೊಂದಾಣಿಕೆ ಮಾಡುವ ಮೂಲಕ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಲಾಗುತ್ತದೆ.

ಪುಟ 2B

ದಿಗ್ವಿಜಯ 24X7 NEWS
ವಿಜಯವಾಣಿ ಫೋನ್ ಇನ್



ವಿಜಯವಾಣಿ, ದಿಗ್ವಿಜಯ ನ್ಯೂಸ್ ಫೋನ್-ಇನ್ ಕಾರ್ಯಕ್ರಮದಲ್ಲಿ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್.

## ನಾಲ್ಕು ಪ್ರಮುಖ ತೀರ್ಮಾನ

**ಸಾರ್ವಜನಿಕರಿಗೆ ಹೊರೆಯಾಗದಂತೆ ಕ್ರಮ ಕೈಗೊಳ್ಳಬೇಕೆಂಬ ಮುಖ್ಯಮಂತ್ರಿ ಯಡಿಯೂರಪ್ಪ ಸೂಚನೆ ಮೇರೆಗೆ ಕೈಗೊಳ್ಳಲಾಗುತ್ತಿರುವ ನಾಲ್ಕು ಪ್ರಮುಖ ತೀರ್ಮಾನಗಳ ಬಗ್ಗೆ ಆಯುಕ್ತರು ಮಾಹಿತಿ ನೀಡಿದರು.**

**1 ಪಾಲಿಕೆಯಿಂದಲೇ ವಲಯ ಗುರುತು**

**ಎ,** ಬಿ, ಸಿ, ಡಿ ಹಾಗೂ ಇ ಎಂದು ಗೈಡೆನ್ಸ್ ವ್ಯಾಲ್ಯುಗೆ ಅನುಗುಣವಾಗಿ ಆಸ್ತಿ ತೆರಿಗೆ ನಿಗದಿಪಡಿಸಲಾಗಿದೆ. ಎ ವಲಯದಲ್ಲಿ ಹೆಚ್ಚು ತೆರಿಗೆಯಿದ್ದರೆ ಇ ವಲಯದಲ್ಲಿ ಕಡಿಮೆ ಇರುತ್ತದೆ. ಈಗಿನ ವ್ಯವಸ್ಥೆಯಂತೆ ಸಾರ್ವಜನಿಕರು ತೆರಿಗೆ ಕಟ್ಟುವ ವೇಳೆಯಲ್ಲಿ ತಮ್ಮ ಆಸ್ತಿ ಎ ವಲಯದಲ್ಲಿದ್ದರೂ ಇ ವಲಯ ಎಂದು ನಮೂದಿಸಿ ತೆರಿಗೆ ವಂಚಿಸುತ್ತಿದ್ದಾರೆ.

ಪುಟ 2B

**ಫೋನ್‌ಇನ್ ವಿಶೇಷ ಪುಟ 6**

ವಿಜಯವಾಣಿ
ಕನ್ನಡಿಗರ ಧ್ವನಿ

| Date | 23-11-2020 |
| --- | --- |
| Page No | 2B |

ಅನೇಕ ಸುಧಾರಣಾ ಕ್ರಮ | ಮಂಜುನಾಥಪ್ರಸಾದ್ ಮಾಹಿತಿ

# ಜನರಿಗೆ ಹೊರೆಯಿಲ್ಲ, ಆದಾಯಕ್ಕೂ ಬರವಿಲ್ಲ

**ಮೊದಲನೇ ಪುಟದಿಂದ...**

ಆಸ್ತಿ ತೆರಿಗೆ ಪಾವತಿ ತಂತ್ರಾಂಶದಲ್ಲಿರುವ ಲೋಪ ಸರಿಪಡಿಸುವ ಮೂಲಕ, ತೆರಿಗೆ ಹೆಚ್ಚಳ ಮಾಡದೆಯೇ ಪಾಲಿಕೆ ಆದಾಯ ಹೆಚ್ಚಿಸಲಾಗಿದೆ. ನಾಗರಿಕರಿಗೆ ತೊಂದರೆ ಆಗದಂತೆ ಪಾಲಿಕೆ ಆರ್ಥಿಕ ಸ್ವಾವಲಂಬನೆಯತ್ತ ಸಾಗಬೇಕೆಂಬ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಶಯದಂತೆ ಇಂತಹ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದಾಗಿ ಆಯುಕ್ತರು ಹೇಳಿದರು.

**ಸೆಸ್ ನಡುವೆ ಹೊಂದಾಣಿಕೆ:** ತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆಗೆ ಬಿಬಿಎಂಪಿ ವಾರ್ಷಿಕ ಸುಮಾರು 1 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದೆ. ಈ ಕಾರ್ಯಕ್ಕೆ ಸಾರ್ವಜನಿಕರಿಂದ ಆಸ್ತಿ ತೆರಿಗೆ ಜತೆಗೆ ತ್ಯಾಜ್ಯ ಕರ(ಸೆಸ್) ಪಡೆಯಲಾಗುತ್ತಿದೆ. ಆದರೆ ಇದರಿಂದ 45-50 ಕೋಟಿ ರೂ. ಲಭಿಸುತ್ತಿದೆ. ತ್ಯಾಜ್ಯ ಕರದ ಜತೆಗೆ ಗ್ರಂಥಾಲಯ ಕರದಿಂದ ಪ್ರತಿ ವರ್ಷ 100-120 ಕೋಟಿ ರೂ. ಹಾಗೂ ಭಿಕ್ಷಾಟನೆ ನಿರ್ಮೂಲನೆ ಕರದಿಂದ 40-50 ಕೋಟಿ ರೂ. ಸಂಗ್ರಹವಾಗುತ್ತಿದೆ. ಆದರೆ ಬೆಂಗಳೂರಿನ ಗ್ರಂಥಾಲಯಗಳ ನಿರ್ವಹಣೆಗೆ ವರ್ಷಕ್ಕೆ 40-45 ಕೋಟಿ ರೂ. ಹಾಗೂ ಭಿಕ್ಷಾಟನೆ ನಿರ್ಮೂಲನೆ ಕೇಂದ್ರಗಳಿಗೆ 4-5 ಕೋಟಿ ರೂ. ಸಾಕಾಗುತ್ತದೆ. ಕರ ಸಂಗ್ರಹದಿಂದ ಲಭಿಸುತ್ತಿರುವ ಹೆಚ್ಚಿನ ಹಣವನ್ನು ರಾಜ್ಯದೆಲ್ಲೆಡೆ ಗ್ರಂಥಾಲಯ ನಿರ್ವಹಣೆಗೆ ಹಾಗೂ ರಾಜ್ಯದ ಇತರೆಡೆ ಭಿಕ್ಷಾಟನೆ ನಿರ್ಮೂಲನೆ ಕೇಂದ್ರಗಳ ಸ್ಥಾಪನೆಗೆ ಬಳಕೆ ಮಾಡಲಾಗುತ್ತಿದೆ. ಆದ್ದರಿಂದ, ಭಿಕ್ಷಾಟನೆ ನಿರ್ಮೂಲನೆ ಹಾಗೂ ಗ್ರಂಥಾಲಯ ಕರದಲ್ಲಿ ಕಡಿತ ಮಾಡಲಾಗುತ್ತದೆ. ಆ ಪ್ರಮಾಣವನ್ನು ತ್ಯಾಜ್ಯ ಕರದಲ್ಲಿ ಹೆಚ್ಚಳ ಮಾಡಲಾಗುತ್ತದೆ. ತ್ಯಾಜ್ಯ ನಿರ್ವಹಣೆಗೆ ಪಾಲಿಕೆಗೆ ಹೆಚ್ಚಿನ ಆದಾಯ ಲಭಿಸುತ್ತದಾದರೂ ಸಾರ್ವಜನಿಕರಿಗೆ ಹೆಚ್ಚಿನ ಹೊರೆ ಆಗುವುದಿಲ್ಲ ಎಂದು ಮಂಜುನಾಥ ಪ್ರಸಾದ್ ಹೇಳಿದರು.

### ತಂತ್ರಾಂಶದ ದೋಷ ನಿವಾರಣೆಯಿಂದ ಆದಾಯ



**ಪಾಲಿಕೆಗೆ ಮುಖ್ಯ ಆದಾಯದ ಮೂಲವಾಗಿರುವ ಆಸ್ತಿ ತೆರಿಗೆಯಲ್ಲಿ ನಿರೀಕ್ಷಿತ ಗುರಿ ಮುಟ್ಟಲಾಗುತ್ತಿಲ್ಲ. ತೆರಿಗೆ ಹೆಚ್ಚಳ ಮೂಲಕ ಆದಾಯ ಹೆಚ್ಚಳ ಒಂದು ಮಾರ್ಗ ವಾದರೆ, ತೆರಿಗೆ ಸಂಗ್ರಹ ವ್ಯವಸ್ಥೆಯಲ್ಲಿನ ಲೋಪ ಸರಿಪಡಿಸಿ ಸಂಪನ್ಮೂಲ ಕ್ರೋಡೀಕರಿಸುವುದು ಮತ್ತೊಂದು ಮಾರ್ಗ ಎಂದು ಮಂಜುನಾಥ ಪ್ರಸಾದ್ ತಿಳಿಸಿದರು.**

## ನಾಲ್ಕು ಪ್ರಮುಖ ತೀರ್ಮಾನ

**ಮೊದಲನೇ ಪುಟದಿಂದ...**

ಆದರೆ ಈಗ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುತ್ತಿದೆ. ಆಸ್ತಿಯ ಪಿಐಡಿ ಸಂಖ್ಯೆ ನಮೂದಿಸುತ್ತಿದ್ದಂತೆ ತಂತ್ರಾಂಶವೇ ಆ ಆಸ್ತಿ ವಲಯವನ್ನು ಗುರುತು ಮಾಡುತ್ತದೆ. ಇದು ಹೆಚ್ಚಿನ ತೆರಿಗೆ ಸಂಗ್ರಹಕ್ಕೆ ಸಹಕಾರಿ.

**2 ನಕ್ಷೆ ಉಲ್ಲಂಘನೆ ಹೆಚ್ಚಳ:** ಸದ್ಯ ಅನುಮೋದಿತ ನಕ್ಷೆಗಿಂತ ಶೇ.5 ಉಲ್ಲಂಘನೆಯಾಗಿ ಕಟ್ಟಡ ನಿರ್ಮಿಸಿದ್ದರೆ ಅದಕ್ಕೆ ದಂಡ ವಿಧಿಸಿ ಸ್ವಾಧೀನ ಪತ್ರ ನೀಡಲಾಗುತ್ತಿದೆ. ಆದರೆ ಇದರಲ್ಲಿ ಸಾಕಷ್ಟು ಭ್ರಷ್ಟಾಚಾರದ ಜತೆಗೆ ಆದಾಯದ ಸೋರಿಕೆಯೂ ಆಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ನಕ್ಷೆ ಉಲ್ಲಂಘನೆಯಾಗಿದ್ದರೂ ಬಿಬಿಎಂಪಿ ಅಧಿಕಾರಿಗಳು ಲಂಚ ಪಡೆದು ಶೇ.5 ಉಲ್ಲಂಘನೆ ಎಂದೇ ನಮೂದಿಸುತ್ತಿದ್ದಾರೆ. ಬೇರೆ ಊರುಗಳಿಗೆ ಹೋಲಿಸಿದಲ್ಲಿ ಬೆಂಗಳೂರಿನಲ್ಲಿ ಭೂಮಿಯ ಮೌಲ್ಯ ಅತಿ ಹೆಚ್ಚಿದೆ. ಹೀಗಾಗಿ ಉಲ್ಲಂಘನೆ ಪ್ರಮಾಣವನ್ನು ಶೇ.15ಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಇದರಿಂದಾಗಿ, ಮಾಲೀಕರು ಶೇ.15ರವರೆಗೆ ಉಲ್ಲಂಘನೆಯ ವಾಸ್ತವ ಸ್ಥಿತಿಗೆ ಅನುಗುಣವಾಗಿ ದಂಡ ಪಾವತಿಸಿ ಸ್ವಾಧೀನ ಪತ್ರ ಪಡೆಯುತ್ತಾರೆ. ಭ್ರಷ್ಟಾಚಾರಕ್ಕೆ ಕಡಿವಾಣ ಬೀಳುವುದರ ಜತೆಗೆ ಪಾಲಿಕೆ ಆದಾಯವೂ ಹೆಚ್ಚುತ್ತದೆ.

**3 ಅಕ್ರಮ ಅಂತಸ್ತಿಗೆ ದುಪ್ಪಟ್ಟು ತೆರಿಗೆ:** ಶೇ.15ಕ್ಕಿಂತ ಹೆಚ್ಚಿನ ಉಲ್ಲಂಘನೆ ಅಥವಾ ಒಂದಿಡೀ ಅಂತಸ್ತನ್ನು ಅಕ್ರಮವಾಗಿ ನಿರ್ಮಿಸಿದರೆ, ಕಟ್ಟಡದ ನೆಲ ಮಹಡಿಯನ್ನು ಬಿಬಿಎಂಪಿ ತೆಕ್ಕೆಗೆ ಪಡೆಯಬೇಕೆಂಬ ಚರ್ಚೆ ನಡೆದಿದ್ದವು. ಹೈದರಾಬಾದ್‌ನಲ್ಲಿ ಈ ವ್ಯವಸ್ಥೆ ಇದೆ. ಅದರ ಬದಲಿಗೆ ಬೆಂಗಳೂರಿಗೆ ಬೇರೆ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ. ಹೆಚ್ಚುವರಿಯಾಗಿ ನಿರ್ಮಾಣವಾಗಿರುವ ಪ್ರತಿ ಅಂತಸ್ತಿಗೆ ದುಪ್ಪಟ್ಟು ತೆರಿಗೆ ಸಂಗ್ರಹಿಸಲು ನಿರ್ಧರಿಸಲಾಗಿದೆ.

**4 ಹೊಸ ಆಸ್ತಿಗಳು ವ್ಯಾಪ್ತಿಗೆ:** ಅಧಿಕಾರಿಗಳ ಶಾಮೀಲು ಸೇರಿ ಅನೇಕ ಕಾರಣಗಳಿಂದಾಗಿ ಆಸ್ತಿಗಳು ತೆರಿಗೆ ವ್ಯಾಪ್ತಿಗೆ ಬಾರದ ಪ್ರಕರಣಗಳೂ ಇವೆ. ಸಂಪೂರ್ಣ ಆಸ್ತಿಗಳ ಸಮೀಕ್ಷೆ ಮೂಲಕ ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರಲಾಗುತ್ತದೆ. ಕಡಿಮೆ ಮೌಲ್ಯಮಾಪನವಾಗಿರುವ ಆಸ್ತಿಗಳನ್ನೂ ಗುರುತಿಸಿ ವಾಸ್ತವಿಕ ತೆರಿಗೆ ವಿಧಿಸಲಾಗುತ್ತದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 23-11-2020 |
| --- | --- |
| Page No | 3 |

# ರಾಜಧಾನಿಯಲ್ಲೇ ಶೇ.41 ಕೋವಿಡ್ ಪರೀಕ್ಷೆ

**ಬೆಂಗಳೂರು:** ರಾಜ್ಯದಲ್ಲಿ ನ.21ರ ವೇಳೆಗೆ ನಡೆಸಿದ 1 ಕೋಟಿ ಕೋವಿಡ್ ಸೋಂಕು ಪರೀಕ್ಷೆಯಲ್ಲಿ ಶೇ.41 ರಾಜಧಾನಿಯಲ್ಲಿ ನಡೆಸಿದ ಪರೀಕ್ಷೆಗಳಾಗಿವೆ. ಕರೊನಾ ಸೋಂಕು ಕಾಣಿಸಿಕೊಂಡು 257 ದಿನಗಳಾಗಿವೆ. ಈವರೆಗೆ ರಾಜ್ಯದ 30 ಜಿಲ್ಲೆಗಳ ಕೋವಿಡ್ ಪರೀಕ್ಷೆ ಪ್ರಮಾಣ 1 ಕೋಟಿ ದಾಟಿದೆ. ಇದರಲ್ಲಿ 29 ಜಿಲ್ಲೆಗಳು ಸೇರಿ 59 ಲಕ್ಷ ಪರೀಕ್ಷೆ ಕೈಗೊಂಡಿದ್ದರೆ, ಬೆಂಗಳೂರಿನಲ್ಲಿ 41 ಲಕ್ಷ ಪರೀಕ್ಷೆ ಮಾಡಲಾಗಿದೆ. ಸೋಂಕು ನಿಯಂತ್ರಣಕ್ಕೆ ಚುರುಕಿನ ಕೋವಿಡ್ ಪರೀಕ್ಷೆ ನಡೆಸಬೇಕೆಂಬ ಕೇಂದ್ರ ಸರ್ಕಾರದ ನಿರ್ದೇಶನವನ್ನು ಬಿಬಿಎಂಪಿ ಪಾಲಿಸಿದೆ.

**» 21 ದಿನದಲ್ಲಿ 10 ಲಕ್ಷ ಟೆಸ್ಟ್**

**ವೇಗದ 10 ಲಕ್ಷ ಕರೊನಾ ಪರೀಕ್ಷೆ:** ನಗರದಲ್ಲಿ ಕರೊನಾ ಕಾಣಿಸಿಕೊಂಡ ಮೊದಲ ದಿನದಿಂದ (ಮಾ.8) 109 ದಿನಗಳವರೆಗೆ (ಜೂ.26) ಕೇವಲ 1 ಲಕ್ಷ ಪರೀಕ್ಷೆ ಮಾಡಲಾಗಿತ್ತು. ಸೆ.4ರ ವೇಳೆಗೆ 10 ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಯಿತು. ಅ.8ಕ್ಕೆ 20 ಲಕ್ಷ, ಅ.30ಕ್ಕೆ 30 ಲಕ್ಷ ಹಾಗೂ ನ.20ಕ್ಕೆ 40 ಲಕ್ಷ ಪರೀಕ್ಷೆ ಪೂರೈಸಲಾಯಿತು. ಇದರಲ್ಲಿ ಕೊನೆಯ ಅವಧಿಯ ಅ.30 ರಿಂದ ನ.20ರವರೆಗಿನ ಕೇವಲ 21 ದಿನಗಳಲ್ಲಿ ಸರಾಸರಿ 50 ಸಾವಿರ ಪರೀಕ್ಷೆಯಂತೆ 10 ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಗಿದೆ ಎಂದು ಬಿಬಿಎಂಪಿ ಕೋವಿಡ್ ವಾರ್‌ರೂಂ ಬುಲೆಟಿನ್ ತಿಳಿಸಿದೆ.

## ಐಸಿಯು ದಾಖಲು 237ಕ್ಕೆ ಇಳಿಕೆ

**ಬೆಂಗಳೂರು:** ರಾಜಧಾನಿಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸೋಂಕಿತರ ಸಂಖ್ಯೆ ಭಾನುವಾರ 237ಕ್ಕೆ ಇಳಿಮುಖವಾಗಿದೆ. ಕಳೆದ ಒಂದು ತಿಂಗಳಿಂದ ಕರೊನಾ ಸೋಂಕಿತರ ಸಂಖ್ಯೆಯಲ್ಲಿ ಇಳಿಮುಖ ಆಗಿದ್ದರೂ, ಐಸಿಯು ಚಿಕಿತ್ಸೆ ಪಡೆಯುವವರ ಸಂಖ್ಯೆ ಮಾತ್ರ 400ಕ್ಕಿಂತ ಅಧಿಕವಾಗಿತ್ತು. 10 ದಿನಗಳಿಂದೀಚೆಗೆ ಸಕ್ರಿಯ ಸೋಂಕಿತರ ಸಂಖ್ಯೆ 18,172ಕ್ಕೆ ಇಳಿದು ಐಸಿಯು ದಾಖಲು ಪ್ರಮಾಣ ಕಡಿಮೆಯಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 23-11-2020 |
| --- | --- |
| Page No | 3 |

# ಎರಡನೇ ಅಲೆ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ

**ಬೆಂಗಳೂರು:** ಕರೊನಾ ಸೋಂಕು ಎರಡನೇ ಅಲೆ ನಿಯಂತ್ರಿಸಲು ರಾಜ್ಯ ಅಗತ್ಯ ಕ್ರಮಗಳೊಂದಿಗೆ ಸಜ್ಜಾಗುತ್ತಿದೆ ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ತಿಳಿಸಿದ್ದಾರೆ.

» **ಆರೋಗ್ಯ ಇಲಾಖೆ ಎಸಿಎಸ್ ಜಾವೇದ್ ಅಖ್ತರ್ ಹೇಳಿಕೆ**

ನಗರದಲ್ಲಿ ಭಾನುವಾರ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫಾನಾ) ಹಮ್ಮಿಕೊಂಡಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು. ರಾಜ್ಯದಲ್ಲಿ ಸದ್ಯ ಕರೊನಾ ನಿಯಂತ್ರಣದಲ್ಲಿದೆ. ಹಾಗಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಮೀಸಲಿಟ್ಟಿದ್ದ ಹಾಸಿಗೆಗಳನ್ನು ವಾಪಸ್ ನೀಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುವುದು. ಒಂದು ವೇಳೆ ಕರೊನಾ ಎರಡನೇ ಅಲೆ ಕಾಣಿಸಿಕೊಂಡಲ್ಲಿ ಪುನಃ ಖಾಸಗಿ ಆಸ್ಪತ್ರೆಗಳ ಸಹಕಾರ ಪಡೆಯಲಾಗುವುದು ಎಂದರು.

ಕರೊನಾ ನಿಯಂತ್ರಣ ಹಾಗೂ ಸೋಂಕಿತರ ಆರೈಕೆಗೆ ಖಾಸಗಿ ಆಸ್ಪತ್ರೆಗಳು ಸರ್ಕಾರಕ್ಕೆ ಅಗತ್ಯ ಸಹಕಾರ ನೀಡಲಿದೆ. ಯಾವುದೇ ಸಂದರ್ಭದಲ್ಲಿ ಕೋವಿಡ್ ಹಾಸಿಗೆಗಳ ಅಗತ್ಯ ಬಿದ್ದಲ್ಲಿ 5 ದಿನಗಳಲ್ಲಿ ವ್ಯವಸ್ಥೆ ಮಾಡಲಾಗುವುದು ಎಂದು ಸಂಘದ ನೂತನ ಅಧ್ಯಕ್ಷ ಡಾ. ಎಚ್.ಎಂ. ಪ್ರಸನ್ನ ಹೇಳಿದರು. ಮಾಜಿ ಅಧ್ಯಕ್ಷ ಡಾ. ಆರ್. ರವೀಂದ್ರ ಮತ್ತಿತರರು ಉಪಸ್ಥಿತರಿದ್ದರು.

**ಪದಾಧಿಕಾರಿಗಳ ಪದಗ್ರಹಣ:** ಫಾನಾದ ನೂತನ ಅಧ್ಯಕ್ಷರಾಗಿ ಡಾ.ಎಚ್.ಎಂ.ಪ್ರಸನ್ನ ಅಧಿಕಾರ ವಹಿಸಿಕೊಂಡರು. ಉಪಾಧ್ಯಕ್ಷರಾಗಿ ಡಾ. ಶೋಭಾ ಪ್ರಕಾಶ್, ಕಾರ್ಯದರ್ಶಿಯಾಗಿ ವೈ.ಎಲ್.ರಾಜಶೇಖರ್, ಸಹ ಕಾರ್ಯದರ್ಶಿಯಾಗಿ ಡಾ. ಜಿ.ವಿ. ದಿವಾಕರ್, ಖಜಾಂಚಿಯಾಗಿ ಡಾ.ಎಂ.ಎಲ್ . ಗಿರಿಧರ್ ಅಧಿಕಾರ ಸ್ವೀಕಾರ ಮಾಡಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 23-11-2020 |
| --- | --- |
| Page No | 3 |

# ಬೀದಿಬದಿ ವ್ಯಾಪಾರಿಗಳ ತೆರವು

**» ರಸೆಲ್ ಮಾರುಕಟ್ಟೆ ಎದುರಿನ ರಸ್ತೆ**

**ಬೆಂಗಳೂರು:** ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ಮಾಡುತ್ತಾ ವಾಹನಗಳು ಹಾಗೂ ಪಾದಚಾರಿಗಳ ಸಂಚಾರಕ್ಕೆ ಅಡ್ಡಿ ಉಂಟುಮಾಡುತ್ತಿದ್ದ ವ್ಯಾಪಾರಿಗಳನ್ನು ಬಿಬಿಎಂಪಿ ಮಾರ್ಷಲ್‌ಗಳು ತೆರವುಗೊಳಿಸಿದ್ದಾರೆ.

ರಸೆಲ್ ಮಾರುಕಟ್ಟೆ ಮುಂಭಾಗದ ರಸ್ತೆಯಲ್ಲಿ ವ್ಯಾಪಾರಿಗಳು ನಡು ರಸ್ತೆಯಲ್ಲಿ ತರಕಾರಿ, ಹಣ್ಣಿನ ಬುಟ್ಟಿಗಳನ್ನು ಇಟ್ಟುಕೊಂಡು ಹಾಗೂ ವಾಹನ ನಿಲ್ಲಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಹಲವು ದೂರುಗಳು ಕೇಳಿಬಂದಿದ್ದವು. ಹೀಗಾಗಿ, ಭಾನುವಾರ ಬಿಬಿಎಂಪಿ ಮಾರ್ಷಲ್‌ಗಳು ರಸ್ತೆಗಳಲ್ಲಿ ವ್ಯಾಪಾರ ನಡೆಸುತ್ತಿದ್ದವರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು.

ವಿಶ್ವವಾಣಿ

| | |
|---|---|
| Date | 23-11-2020 |
| Page No | 3 |



ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಬಿದ್ದಿರುವ ರಾಶಿ ರಾಶಿ ಕಸ.

ವಿಶ್ವವಾಣಿ

| Date | 23-11-2020 |
|---|---|
| Page No | 3 |

# 1,704 ಮಂದಿಗೆ ಕರೋನಾ

ಬೆಂಗಳೂರು: ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲಿ 1,704 ಮಂದಿಗೆ ಸೋಂಕು ತಗುಲಿದ್ದು, 1,537 ಜನ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಒಂದೇ ದಿನ ಒಟ್ಟು 13 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಸೋಂಕಿತರ ಸಂಖ್ಯೆ 8,73,046ಕ್ಕೆ ಏರಿಕೆಯಾಗಿದೆ. ಈ ಪೈಕಿ 8,36,505 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಪ್ರಸ್ತುತ 24,868 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ ಒಟ್ಟು 11,654 ಮಂದಿ ಸೋಂಕಿಗೆ ಮೃತಪಟ್ಟಿದ್ದು, 470 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಟ್ಟು 20,399 ಆ್ಯಂಟಿಜೆನ್ ಟೆಸ್ಟ್, 1,06,505 ಆರ್‌ಟಿಪಿಸಿಆರ್ ಇತ್ಯಾದಿ ಪರೀಕ್ಷೆ ಮಾಡಿದ್ದು, ಒಟ್ಟು 1,26,904 ಕರೋನಾ ಪರೀಕ್ಷೆಗಳನ್ನು ಮಾಡಲಾಗಿದೆ. ಇಲ್ಲಿಯವರೆಗೆ ರಾಜ್ಯದಲ್ಲಿ ಒಟ್ಟು 1,02,33,378 ಕರೋನಾ ಪರೀಕ್ಷೆಗಳನ್ನು ಮಾಡಲಾಗಿದೆ. ಬೆಂಗಳೂರು ನಗರದಲ್ಲಿ 1,039 ಮಂದಿಗೆ ಸೋಂಕು ತಗುಲಿದ್ದು, 10 ಮಂದಿ ಮೃತಪಟ್ಟಿದ್ದಾರೆ. ಮೈಸೂರು 100, ದಕ್ಷಿಣ ಕನ್ನಡದಲ್ಲಿ 46, ಹಾಸನ 44, ಬೆಂಗಳೂರು ಗ್ರಾಮಾಂತರದಲ್ಲಿ 41 ಜನರಲ್ಲಿ ಸೋಂಕು ಪತ್ತೆಯಾದರೆ, ರಾಯಚೂರು, ಬೆಳಗಾವಿ ಹಾಗೂ ಮಂಡ್ಯದಲ್ಲಿ ತಲಾ 32 ಮಂದಿಗೆ ಸೋಂಕು ಬಂದಿದೆ. ಒಟ್ಟು 470 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಪೈಕಿ ಬೆಂಗಳೂರು ನಗರ 237, ಮೈಸೂರು 27, ತುಮಕೂರು 29, ಕಲಬುರಗಿ 17, ಬಳ್ಳಾರಿಯಲ್ಲಿ 16 ಜನ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

| Date | 23-11-2020 |
|---|---|
| Page No | 3 |


# ಕೊಳಚೆ ನೀರಿಗೆ ಲಕ್ಷ ಲಕ್ಷ ಸುರಿಯುವ ರೈತ!

## ಕೃಷಿಗಾಗಿ ಕೊಳಚೆನೀರು ಖರೀದಿಸುತ್ತಿರುವ ಮೊದಲ ರೈತ | ಕೈತುಂಬಾ ಆದಾಯ ಪಡೆವ ಸುರೇಶ್

**ಬೆಂಗಳೂರು:** ನಗರದ ಜನ ಬಳಕೆ ಮಾಡಿದ ನೀರನ್ನು ನೆರೆಯ ಊರುಗಳಿಗೆ ಹರಿಸುವ ಬಗ್ಗೆ ಪರ-ವಿರೋಧಗಳು ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಅಂತಹದ್ದೇ ಬರದ ನಾಡಿನ ರೈತರೊಬ್ಬರು ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಸುರಿದು ಪಟ್ಟಣದ ಕೊಳಚೆನೀರು ಖರೀದಿಸಿ, ಕೈತುಂಬಾ ಆದಾಯ ಗಳಿಸುತ್ತಿದ್ದಾರೆ. ರಾಜ್ಯದಲ್ಲಿ ಹೀಗೆ ಕೃಷಿಗಾಗಿ ಹಣ ಕೊಟ್ಟು, ಕೊಳಚೆನೀರು ಖರೀದಿಸುತ್ತಿರುವ ಮೊದಲ ರೈತ ಕೂಡ ಇವರಾಗಿದ್ದಾರೆ!

**ಕೊಳಚೆನೀರಿಗೆ ಭಾರೀ ಬೇಡಿಕೆ:** ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ತಾಲೂಕಿನ ಹಿತ್ತಲಹಳ್ಳಿಯ ಎಚ್.ಕೆ. ಸುರೇಶ್, ಶಿಡ್ಲಘಟ್ಟ ಪಟ್ಟಣದ ಜನ ಬಳಸಿದ ನೀರನ್ನು ಹಣಕೊಟ್ಟು ಖರೀದಿಸಿ ಅದೇ ನೀರಿನಲ್ಲಿ ಮಾವು, ದಾಳಿಂಬೆ, ರೇಷ್ಮೆ ಬೆಳೆದು ಮಿಂಚುತ್ತಿದ್ದಾರೆ.

ಈ ಪ್ರಯೋಗವು ಹಳ್ಳಿಯ ಇತರೆ ರೈತರಿಗೂ ಮಾದರಿಯಾಗಿದ್ದು, ಅವರು ಕೂಡ ಖರೀದಿಗೆ ಮುಂದಾಗಿದ್ದಾರೆ. ಪರಿಣಾಮ ಶಿಡ್ಲಘಟ್ಟ ಪಟ್ಟಣದ ಕೊಳಚೆನೀರಿಗೆ ಭಾರೀ ಬೇಡಿಕೆ ಬಂದಿದ್ದು, ಹರಾಜು ಮೂಲಕ ಹಂಚಿಕೆ ಮಾಡುವಂತಾಗಿದೆ.

**ರಾಜ್ಯಮಟ್ಟದ ಅತ್ಯುತ್ತಮ ರೈತ:** ಪ್ರಸಕ್ತ ಸಾಲಿನಲ್ಲಿ ಎಚ್.ಕೆ. ಸುರೇಶ್ ಅವರು ಐದೂವರೆ ಲಕ್ಷ ರೂ. ಕೊಟ್ಟು ನೀರು ಖರೀದಿಸಿದ್ದಾರೆ. ಮೊದಲ ಹಂತದಲ್ಲಿ ಸಂಸ್ಕರಣೆಗೊಂಡು ಪೂರೈಕೆಯಾದ ನೀರನ್ನು, ಸ್ವಂತ ವ್ಯವಸ್ಥೆಯಲ್ಲಿ ಮರುಸಂಸ್ಕರಿಸಿ ಹನಿ ನೀರಾವರಿ ಪದ್ಧತಿಯಲ್ಲಿ ಬೆಳೆಗಳಿಗೆ ಉಣಿಸುತ್ತಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಬರೋಬ್ಬರಿ 42.80 ಲಕ್ಷ ರೂ. ಕೊಳಚೆನೀರಿಗಾಗಿ ಸುರಿದಿದ್ದಾರೆ. ಇದಕ್ಕೆ ಪ್ರತಿಯಾಗಿ ಹೆಚ್ಚು-ಕಡಿಮೆ ದುಪ್ಪಟ್ಟು ಆದಾಯ ಗಳಿಸಿದ್ದಾರೆ. ಇದರೊಂದಿಗೆ ರಾಜ್ಯಮಟ್ಟದ ಅತ್ಯುತ್ತಮ ರೈತ ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ.



ಪ್ರಶಸ್ತಿಯೊಂದಿಗೆ ಸುರೇಶ್.



ಜಮೀನಿನಲ್ಲಿ ಯುಜಿಡಿ ನೀರು ಸಂಗ್ರಹವಾಗಿರುವುದು.

**ಇಸ್ರೇಲ್ ಪ್ರವಾಸದಿಂದ ಬದಲಾದ ಅದೃಷ್ಟ:** ಈ ಹಿಂದೆ ತಮ್ಮ 6 ಎಕರೆ ಮಳೆಯಾಶ್ರಿತ ಜಮೀನಿನಲ್ಲಿ ಸುರೇಶ್ ಸುಮಾರು 18-19 ಕೊಳವೆಬಾವಿಗಳನ್ನು ಕೊರೆಸಿ ಕೈಸುಟ್ಟುಕೊಂಡಿದ್ದಾರೆ. ಒಂದೇ ಒಂದು ಬಾವಿಯಿಂದ ನೀರು ದೊರೆಯಲಿಲ್ಲ. ಇದರಿಂದ ಬೇಸತ್ತ ಸಂದರ್ಭದಲ್ಲೇ 1999ರಲ್ಲಿ ಯೋಜನೆಯೊಂದರಲ್ಲಿ ಸರ್ಕಾರ ಆರು ರೈತರನ್ನು ಇಸ್ರೇಲ್ ಪ್ರವಾಸಕ್ಕೆ ಕಳುಹಿಸಿತು. ಆ ಪೈಕಿ ಸುರೇಶ್ ಕೂಡ ಒಬ್ಬರಾಗಿದ್ದರು. ಅಲ್ಲಿಂದ ಬಂದ ನಂತರ ಅವರ ಜೀವನ ಹೊಸ ತಿರುವು ಪಡೆದುಕೊಂಡಿತು. ಮಳೆ ನೀರು ಸಂಗ್ರಹಿಸಿ, ತಂತ್ರಜ್ಞಾನಗಳ ನೆರವಿನಲ್ಲಿ ಹನಿ ನೀರಾವರಿಯತ್ತ ಮುಖಮಾಡಿದರು. ಈ ಮಧ್ಯೆ ಒಂದು ದಿನ ಜಮೀನಿನ ಹತ್ತಿರದಲ್ಲೇ ವ್ಯರ್ಥವಾಗಿ ಹೋಗುತ್ತಿದ್ದ ಕೊಳಚೆನೀರು ಗಮನಸೆಳೆಯಿತು. ಆ ನೀರನ್ನು ಸ್ಥಳೀಯ ಸಂಸ್ಥೆಯ ಅನುಮತಿ ಮೇರೆಗೆ ಸಂಸ್ಕರಿಸಿ ಬಳಸಲು ಮುಂದಾದರು.

**ಮೂರು ಟ್ಯಾಂಕ್ ನಿರ್ಮಾಣ:** 'ಕಳೆದ 18 ವರ್ಷಗಳಿಂದ ಕೊಳವೆಬಾವಿ ಸಹಾಯವಿಲ್ಲದೆ, ಸಮಗ್ರ ಕೃಷಿ ಮಾಡುತ್ತಿದ್ದೇನೆ. ಇನ್ನು ಮನೆ ಬಳಕೆಗೆ ನಿತ್ಯ 2 ಸಾವಿರ ಲೀ. ನೀರು ಬೇಕಾಗುತ್ತದೆ. ಈ ಪೈಕಿ 400 ಲೀ. ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುತ್ತಿದ್ದೇನೆ. ಜತೆಗೆ 50/50, 70/70 ಅಡಿ ಗಾತ್ರದ ಮೂರು ಟ್ಯಾಂಕ್‌ಗಳನ್ನು ನಿರ್ಮಿಸಿದ್ದು, ಇಲ್ಲಿ ಸಂಗ್ರಹವಾದ ಮಳೆ ನೀರನ್ನು ಇತರೆ ಬೆಳೆಗಳು ಮತ್ತು ಮನೆಗೆ ಉಪಯೋಗಿಸುತ್ತಿದ್ದೇವೆ' ಎಂದು ಮಾಹಿತಿ ನೀಡಿದರು.

### ವೈವಿಧ್ಯ ಬೆಳೆಗಳು

'ಜಮೀನಿನಲ್ಲಿ ರೇಷ್ಮೆ ಹುಳುಗಳ ಸಾಕಣೆ, ಕುರಿ, ಸ್ವರ್ಣಧಾರ ಕೋಳಿ, ಮೇವಿನ ಮುಸುಕಿನಜೋಳ, ಅಗಸೆ ಮರ, ನೇಪಿಯರ್ ಹುಲ್ಲು, ಕೈತೋಟ, ಪಪಾಯ, ಸೀಬೆ, ಸೀತಾಫಲ, ನಿಂಬೆ, ಬಾಳೆ ಸೇರಿದಂತೆ ಹಲವು ಹಣ್ಣಿನ ಗಿಡಗಳು, ಸಿಲ್ವರ್‌ಓಕ್‌ನಂತಹ ಅರಣ್ಯ ಮರಗಳನ್ನು ಬೆಳೆಯುತ್ತಿದ್ದೇನೆ. ಸಾಸಿವೆ, ಚೆಂಡು ಹೂವು ರಕ್ಷಣೆ ಬೆಳೆ, ರಾಗಿ, ತೊಗರಿ, ನವಣೆ ಕೂಡ ಬೆಳೆಯುತ್ತಿದ್ದೇನೆ. ಚಾಕಿ ಸಾಕಣೆಯನ್ನು ಮುಖ್ಯಕಸುಬಾಗಿ, ಪ್ರತಿ ಬ್ಯಾಚ್‌ನಲ್ಲಿ 4 ಸಾವಿರ ಡಿಎಫ್‌ಎಲ್ ಮೊಟ್ಟೆಗಳ ಎರಡನೇ ಹಂತದ ಮರಿಗಳನ್ನು ರೈತರಿಗೆ ಮಾರಾಟ ಮಾಡುತ್ತಿದ್ದೇನೆ' ಎಂದು ಸುರೇಶ್ ಹೇಳಿದರು.

### ಹಲವು ಪ್ರಶಸ್ತಿ ಪಡೆದಿರುವ ಸುರೇಶ್

ಎಚ್.ಕೆ. ಸುರೇಶ್ ಮೂರು ಬಾರಿ ಎಸ್ಸೆಸ್ಸೆಲ್ಸಿ ಹಾಗೂ ಎರಡು ಬಾರಿ ಪಿಯುಸಿ ಫೇಲ್ ಆಗಿದ್ದಾರೆ. ನಂತರದಲ್ಲಿ ಬೆಂಗಳೂರು ಕೃಷಿ ವಿವಿಯಲ್ಲಿ ಬಿಎಸ್ಸಿ (ರೇಷ್ಮೆ) ಪದವಿ ಪೂರೈಸಿದ್ದಾರೆ. ಪ್ರಸ್ತುತ ಭಾರತೀಯ ರೇಷ್ಮೆ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದುವರೆಗೆ ಕೃಷಿಗೆ ಸಂಬಂಧಿಸಿದ 8-10 ಪ್ರಶಸ್ತಿಗಳು ಇವರಿಗೆ ಒಲಿದುಬಂದಿವೆ. 25 ದೇಶಗಳಿಂದ ಪ್ರತಿನಿಧಿಗಳು ಸುರೇಶ್ ಅವರ ಜಮೀನಿಗೆ ಭೇಟಿ ನೀಡಿದ್ದಾರೆ. ಮಾಹಿತಿಗೆ ಮೊ: 9986830435.

ಉದಯವಾಣಿ
ಜನಮನದ ಜೀವನಾಡಿ



| Date | 23-11-2020 |
|---|---|
| Page No | 3 |



# ಕಸ ನಿರ್ವಹಣೆ; ಪ್ರತ್ಯೇಕ ಮಂಡಳಿ ರಚನೆಗೆ ಸರ್ಕಾರಕ್ಕೆ ಪ್ರಸ್ತಾವನೆ

**ಬೆಂಗಳೂರು:** ನಗರದಲ್ಲಿ ಕಸ ವಿಲೇವಾರಿ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಕಸ ನಿರ್ವಹಣೆ ಪ್ರತ್ಯೇಕ ಮಂಡಳಿ ರಚನೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಪಾಲಿಕೆ ಮುಂದಾಗಿದೆ. ಕಸ ವಿಲೇವಾರಿಗೆ ಜಲಮಂಡಳಿ, ಬೆಸ್ಕಾಂ ಮಾದರಿಯಲ್ಲಿ ಪ್ರತ್ಯೇಕ ಮಂಡಳಿ ಇದ್ದರೆ ಶೀಘ್ರ ಪರಿಹಾರ ಕಂಡುಕೊಳ್ಳಬಹುದು ಎನ್ನುವುದು ಇದರ ಉದ್ದೇಶವಾಗಿದೆ. ಕಸ ವಿಲೇವಾರಿ ವಿಚಾರದಲ್ಲಿ ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರೂ, ಪಾಲಿಕೆ ಸದಸ್ಯರು, ಮೇಯರ್ ಉಪ ಮೇಯರ್ ಹಾಗೂ ಸಮಿತಿಗಳಿಂದ ಅನುಮೋದನೆ ಇದಾದ ಮೇಲೆ ಸರ್ಕಾರದ ಅನುಮೋದನೆ ಪಡೆದುಕೊಳ್ಳಬೇಕು. ಪಾಲಿಕೆಯ ಕೆಲವು ಸದಸ್ಯರು ಸಹ ಪರೋಕ್ಷವಾಗಿ ಕಸ ವಿಲೇವಾರಿ ಗುತ್ತಿಗೆಯಲ್ಲಿ ತೊಡಗಿಸಿಕೊಂಡಿರುವುದರಿಂದ ಹಲವು ಸಮಸ್ಯೆ ಸೃಷ್ಟಿಯಾಗುತ್ತಿತ್ತು. ಇದೀಗ ಪಾಲಿಕೆ ಸದಸ್ಯರು ಇಲ್ಲದೆ ಇರುವುದರಿಂದ ಮಂಡಳಿ ರಚನೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.


ತ್ಯಾಜ್ಯ ವ್ಯಾಜ್ಯ ಮುಕ್ತಿಗೆ ಕಸ ಮಂಡಳಿ?

ಮಾ.5ರಂದು 'ತ್ಯಾಜ್ಯ ವ್ಯಾಜ್ಯ ಮುಕ್ತಿಗೆ ಕಸ ಮಂಡಳಿ?' ಎಂಬ ಶೀರ್ಷಿಕೆಯಡಿ ಉದಯವಾಣಿ ವಿಶೇಷ ವರದಿ ಪ್ರಕಟಿಸಿತ್ತು.

ಉದಯವಾಣಿ
ಜನಮನದ ಜೀವನಾಡಿ

| Date | 23-11-2020 |
| --- | --- |
| Page No | 4 |



ಸಂಯುಕ್ತ ಕರ್ನಾಟಕ

| Date | 23-11-2020 |
|---|---|
| Page No | 3 |

# ರಸೆಲ್ ಮಾರುಕಟ್ಟೆ ಬೀದಿ ವ್ಯಾಪಾರಿಗಳ ತೆರವು

**ಸಂ.ಕ. ಸಮಾಚಾರ ಬೆಂಗಳೂರು**

ಶಿವಾಜಿನಗರದ ರಸೆಲ್ ಮಾರುಕಟ್ಟೆಯ ಬಳಿ ವಾಹನ ಸಂಚಾರಕ್ಕೆ ಅಡ್ಡಿ ಮಾಡುತ್ತಿದ್ದ ಕಾರಣಕ್ಕೆ ಬೀದಿ ವ್ಯಾಪಾರಿಗಳನ್ನು ಬಿಬಿಎಂಪಿ ಮಾರ್ಷಲ್ ತೆರವುಗೊಳಿಸಿದ್ದಾರೆ.

- **ಬೀದಿ ವ್ಯಾಪಾರಿಗಳಿಂದ ಪಾದಚಾರಿಗಳಿಗೆ ತೊಂದರೆ**
- **ವಾಹನಗಳ ಸಂಚಾರಕ್ಕೆ ಅಡ್ಡಿ, ಟ್ರಾಫಿಕ್ ಜಾಮ್**
- **ಬಿಬಿಎಂಪಿ ಮಾರ್ಷಲ್‌ಗಳ ಕಾರ್ಯಾಚರಣೆ**

ಭಾರತೀನಗರ ವಾರ್ಡ್ ವ್ಯಾಪ್ತಿಯ ರಸೆಲ್ ಮಾರುಕಟ್ಟೆ ಮುಂಭಾಗದ ರಸ್ತೆಯಲ್ಲಿ ವ್ಯಾಪಾರಿಗಳು ನಡು ರಸ್ತೆಯಲ್ಲಿ ತರಕಾರಿ, ಹಣ್ಣಿನ ಬುಟ್ಟಿಗಳನ್ನು ಇಟ್ಟುಕೊಂಡು ಹಾಗೂ ವಾಹನ ನಿಲ್ಲಿಸಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಇದರಿಂದ ವಾಹನ ಸಂಚಾರಕ್ಕೆ ಹಾಗೂ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿತ್ತು.

ಭಾನುವಾರ ಬಿಬಿಎಂಪಿ ಮಾರ್ಷಲ್‌ಗಳು ರಸ್ತೆಯುದ್ದಕ್ಕೂ ವ್ಯಾಪಾರ ನಡೆಸುತ್ತಿದ್ದವರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು. ಅಲ್ಲದೇ ಮತ್ತೆ ರಸ್ತೆಗೆ ಅಡ್ಡಲಾಗಿ ವ್ಯಾಪಾರ ನಡೆಸದಂತೆ ವ್ಯಾಪಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಈ ಹಿಂದೆಯೂ ಈ ಭಾಗದಲ್ಲಿ ವ್ಯಾಪಾರಿಗಳು ರಸ್ತೆಯಲ್ಲಿ ವಸ್ತುಗಳನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದಾಗಲೂ ಅಂತಹವರನ್ನು ತೆರವು ಮಾಡಲಾಗಿತ್ತು. ಈ ವೇಳೆ ವ್ಯಾಪಾರಿಗಳು ಪ್ರತಿಭಟನೆ ನಡೆಸಿ ಮತ್ತೆ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವಂತೆ ಕೋರಿದ್ದರು. ಈ ಹಿನ್ನೆಲೆಯಲ್ಲಿ ಕೆಲ ನಿಯಮ ಪಾಲಿಸುವಂತೆ ಸೂಚಿಸಲಾಗಿತ್ತು. ಆರಂಭದಲ್ಲಿ ಇದನ್ನು ಪಾಲನೆ ಮಾಡಿದ ವ್ಯಾಪಾರಿಗಳು ಇತ್ತೀಚೆಗೆ ಯಾವುದೇ ನಿಯಮ ಪಾಲನೆ ಮಾಡದೆ ತಾವು ನಡೆದಿದ್ದೇ ದಾರಿ ಎಂಬಂತೆ ರಸ್ತೆ ಮಧ್ಯೆಯೇ ವ್ಯಾಪಾರ ಮಾಡಲು ಶುರು ಮಾಡಿದ್ದರು. ಇದು ಮಾತ್ರವಲ್ಲದೆ ತಮ್ಮ ವಾಹನಗಳನ್ನು ಕೂಡಾ ರಸ್ತೆ ಮಧ್ಯದಲ್ಲೇ ನಿಲ್ಲಿಸುತ್ತಿದ್ದರು. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿ ಟ್ರಾಫಿಕ್ ಜಾಮ್ ಆಗುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಬಿಬಿಎಂಪಿ ಮಾರ್ಷಲ್‌ಗಳ ಮೂಲಕ ಬೀದಿ ವ್ಯಾಪಾರಿಗಳನ್ನು ತೆರವು ಮಾಡುವ ಕಾರ್ಯ ಮಾಡಿದೆ.

ಹೊಸ ದಿಗಂತ

| Date | 23-11-2020 |
|---|---|
| Page No | 12 |

ಹೊಸ ದಿಗಂತ

12

23 Nov 2020

# ನಗರದಲ್ಲಿ 41 ಲಕ್ಷ ಜನರಿಗೆ ಕೋವಿಡ್ ಪರೀಕ್ಷೆ

**ಬೆಂಗಳೂರು:** ರಾಜ್ಯದಲ್ಲಿ ನಡೆಸಲಾಗಿರುವ ಕೊರೋನಾ ಪರೀಕ್ಷೆಯಲ್ಲಿ ಶೇ.41 ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸಿದ ಪರೀಕ್ಷೆಗಳಾಗಿವೆ.

ಕೊರೋನಾ ಸೋಂಕು ಮಾ.8 ಮೊದಲ ಬಾರಿಗೆ ಕಾಣಿಸಿಕೊಂಡಿದ್ದು, ಈವರೆಗೆ ಒಟ್ಟು 257 ದಿನಗಳು ಪೂರ್ಣಗೊಂಡಿದೆ. ಈವರೆಗೆ ರಾಜ್ಯದ 30 ಜಿಲ್ಲೆಗಳ ಕೋವಿಡ್ ಪರೀಕ್ಷೆ ಪ್ರಮಾಣ 1 ಕೋಟಿ ದಾಟಿದೆ. ಇದರಲ್ಲಿ 29 ಜಿಲ್ಲೆಗಳು ಸೇರಿ 59 ಲಕ್ಷ ಪರೀಕ್ಷೆ ಕೈಗೊಂಡಿದ್ದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ಬರೋಬ್ಬರಿ 41 ಲಕ್ಷ ಪರೀಕ್ಷೆ ನಡೆಸಲಾಗಿದೆ. ಈ ಮೂಲಕ ಸೋಂಕು ಹರಡುವಿಕೆ ನಿಯಂತ್ರಣಕ್ಕೆ ಆಕ್ರಮಣಕಾರಿ ಕೋವಿಡ್ ಪರೀಕ್ಷೆ ಮಾಡಬೇಕು ಎಂಬ ಕೇಂದ್ರ ಸರ್ಕಾರದ ನಿರ್ದೇಶನವನ್ನು ಬಿಬಿಎಂಪಿ ತಪ್ಪದೆ ಪಾಲಿಸಿದೆ.

ನಗರದಲ್ಲಿ ಸೋಂಕು ಕಾಣಿಸಿಕೊಂಡ ಮೊದಲ ದಿನ (ಮಾ.8)ದಿಂದ 109 ದಿನ (ಜೂ.26)ಗಳಲ್ಲಿ ಕೇವಲ 1 ಲಕ್ಷ ಕೊರೋನಾ ಪರೀಕ್ಷೆ ಮಾಡಲಾಗಿತ್ತು. ನಂತರ ಸೆ.4ರ ವೇಳೆಗೆ 10 ಲಕ್ಷ ಕೋವಿಡ್ ಪರೀಕ್ಷೆ ಮಾಡಲಾಯಿತು. ಅ.8 ಕ್ಕೆ 20 ಲಕ್ಷ, ಅ.30ಕ್ಕೆ 30 ಲಕ್ಷ ಹಾಗೂ ನ.20ಕ್ಕೆ 40 ಲಕ್ಷ ಕೋವಿಡ್ ಪರೀಕ್ಷೆ ಪೂರ್ಣಗೊಳಿಸಲಾಯಿತು. ಇದರಲ್ಲಿ ಕೊನೆಯ ಅವಧಿಯ ಅ.30 ರಿಂದ ನ.20ರವರೆಗಿನ ಕೇವಲ 21 ದಿನಗಳಲ್ಲಿ ಸರಾಸರಿ 50 ಸಾವಿರ ಪರೀಕ್ಷೆಯಂತೆ 10 ಲಕ್ಷ ಕೋವಿಡ್ ಪರೀಕ್ಷೆ ಮಾಡಿದೆ.



## 69 ಸೋಂಕಿತರು ಆಸ್ಪತ್ರೆಯಿಂದ ಡಿಸ್ಚಾರ್ಜ್

ನಗರದಲ್ಲಿ ಭಾನುವಾರ 1039 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 669 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 10 ಜನರು ಮೃತರಾಗಿದ್ದಾರೆ. ನಗರದಲ್ಲಿ ಒಟ್ಟು 3,63,665 ಸೋಂಕಿತರು ದೃಢಪಟ್ಟಿದ್ದು, ಇಲ್ಲಿಯವರೆಗೆ 4068 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,41,424 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್ ನಿಗದಿತ ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 18,172 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರದ ಬಿಬಿಎಂಪಿ ಕೋವಿಡ್ ವರದಿ ಪ್ರಕಾರ ಸಿಟಿಯಲ್ಲಿ ಒಟ್ಟು ಸಕ್ರಿಯ 2 ಕಂಟೈನ್ಮೆಂಟ್ ಜೋನ್‌ಗಳಿವೆ. ನಗರದ 11,31,120 ಜನರನ್ನು ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದ್ದು, ದ್ವಿತೀಯ ಸಂಪರ್ಕಿತರನ್ನು 12,16,273 ಜನರನ್ನು ಗುರುತಿಸಲಾಗಿದೆ. ಇದರಲ್ಲಿ ಪಾಸಿಟಿವ್ ಪ್ರಮಾಣ ಶೇ.9.86 ರಷ್ಟಿದೆ. ಕೊರೋನಾಕ್ಕೆ ಮೃತರಾಗುತ್ತಿರುವ ಪ್ರಮಾಣ ಶೇ.1.12 ರಷ್ಟಿದ್ದು, ಗುಣಮುಖರಾಗುತ್ತಿರುವ ಪ್ರಮಾಣ ಶೇ.93.88 ರಷ್ಟಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 23-11-2020 |
|---|---|
| Page No | 2 |

# ಅನಧಿಕೃತ ಗೋಡೆ ಬರಹದ ವಿರುದ್ಧ ಶಿಸ್ತು ಕ್ರಮ: ಬಿಬಿಎಂಪಿ

ಬೆಂಗಳೂರು, ನ.22: ನಗರದಲ್ಲಿ ಗೋಡೆ ಬರಹ ತೆರವಿಗೆ ಬಿಬಿಎಂಪಿ ಆದೇಶಿಸಿದ್ದು, ಮುಂದಿನ ದಿನಗಳಲ್ಲಿ ಅನಧಿಕೃತ ಗೋಡೆಬರಹ ಹಾಕಿದರೆ ಎಫ್ಐಆರ್ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಮುಂದಿನ ದಿನಗಳಲ್ಲಿ ಇಂತಹ ಯಾವುದೇ ಅನಧಿಕೃತ ಜಾಹೀರಾತುಗಳು ಪ್ರದರ್ಶಿಸದಂತೆ ಅಧಿಕಾರಿಗಳು ಕ್ರಮವಹಿಸಬೇಕು. ಒಂದು ವೇಳೆ ಇಂತಹ ಪ್ರಕರಣಗಳು ಮರುಕಳಿಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಎಚ್ಚರಿಕೆ ನೀಡಿದ್ದಾರೆ.

ಈ ಹಿಂದೆ ಹೈಕೋರ್ಟ್ ನಗರದಲ್ಲಿ ಜಾಹೀರಾತು ನಿಷೇಧಿಸಿ ಆದೇಶ ಹೊರಡಿಸಿತ್ತು. ಫ್ಲೆಕ್ಸ್‌ಗಳ ನಿಷೇಧ ಬಳಿಕ ಕೆಲ ಜಾಹೀರಾತು ಕಂಪನಿಗಳು ಗೋಡೆ ಬರಹ ಬಳಸಲು ಶುರು ಮಾಡಿದ್ದವು. ಇದೀಗ ಗೋಡೆ ಬರಹ ತೆರವಿಗೂ ಹೈಕೋರ್ಟ್ ಆದೇಶಿಸಿದ್ದು, ಅಕ್ರಮವಾಗಿ ಫ್ಲೆಕ್ಸ್, ಬಂಟಿಂಗ್ ಹಾಕಿರುವುದನ್ನು ಸಮೀಕ್ಷೆ ನಡೆಸಲು ಬಿಬಿಎಂಪಿಗೆ ಸೂಚನೆ ನೀಡಿ, ವಾರ್ಡ್‌ವಾರು ಸಮೀಕ್ಷೆ ನಡೆಸಿ, ಗೋಡೆ ಬರಹ ತೆರವುಗೊಳಿಸುವಂತೆ ತಿಳಿಸಿತ್ತು. ಈ ಹಿನ್ನೆಲೆ ಬಿಬಿಎಂಪಿ ಆಯುಕ್ತರು ಬಿಬಿಎಂಪಿಯ ಎಂಟು ವಲಯದ ಜಂಟಿ ಆಯುಕ್ತರಿಗೆ ಗೋಡೆ ಬರಹ ತೆರವುಗೊಳಿಸುವಂತೆ ಆದೇಶ ನೀಡಿದ್ದಾರೆ.

ಜನದನಿಯ ಸಾರಥಿ
ವಾರ್ತಾ ಭಾರತಿ

| Date | 23-11-2020 |
| --- | --- |
| Page No | 8 |

# ಮರಗಳಿಗೆ ಮೊಳೆಗಳನ್ನು ಹೊಡೆಯದಂತೆ ಜನರಲ್ಲಿ ಜಾಗೃತಿ

ಬೆಂಗಳೂರು, ನ.22 : ನನಗೂ ಜೀವವಿದೆ, ನನಗೂ ನೋವಾಗುತ್ತದೆ, ನಾನು ಅರಳಿ ಮರ! ಹೀಗೆ ಹಲವು ಪರಿಸರವಾದಿಗಳು ನಗರದ ಮರಗಳಿಗೆ ಮೊಳೆಗಳನ್ನು ಹಾಗೂ ಪಿನ್‌ಗಳನ್ನು ಹೊಡೆಯುವುದರಿಂದ ರಕ್ಷಿಸಲು ಪೋಸ್ಟರ್‌ಗಳನ್ನು ಬರೆದು ಮರಗಳಿಗೆ ನೇತಾಕಿದ್ದಾರೆ.

ಬೆಂಗಳೂರಿನ ವಿಜಯ ನಗರ ಸುತ್ತಮುತ್ತ ರಾಘವೇಂದ್ರ, ಹಾಗೂ ಅವರ ಇಬ್ಬರು ಸ್ನೇಹಿತರು ಈ ಅಭಿಯಾನವನ್ನು ನಡೆಸುತ್ತಿದ್ದು ಅರಳಿ ಮರಗಳಿಗೆ ಜಾಹೀರಾತು ಫಲಕ ಸಿಕ್ಕಿಸುವ ಉದ್ದೇಶದಿಂದ ಹಾಕಲಾಗಿರುವ ಮೊಳೆಗಳನ್ನು ಹಾಗೂ ಪಿನ್‌ಗಳನ್ನು ತೆರವುಗೊಳಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ನಗರದ ಹಲವು ಮರಗಳಿಗೆ ತಮ್ಮ ಸಂಸ್ಥೆಯ ಜಾಹೀರಾತುಗಳನ್ನು ಹಾಕುವ ಉದ್ದೇಶದಿಂದ ಇಂತಹ ಮೊಳೆಗಳನ್ನು ಹೊಡೆಯಲಾಗುತ್ತಿದೆ. ಇದಕ್ಕೆ ಅನುಮತಿ ಇಲ್ಲದೆ ಇದ್ದರೂ ಒಂದಿಷ್ಟು ಸಂಸ್ಥೆಗಳು ಇಂತಹ ಕೃತ್ಯಗಳನ್ನು ಎಸಗುತ್ತಿವೆ. ಆದರೆ, ಇದರಿಂದ ಮರಗಳಿಗೆ ಆಗುತ್ತಿರುವ ಹಾನಿ ಕುರಿತಾಗಿ ಅವರು ಯೋಚನೆಯನ್ನು ಮಾಡುವುದಿಲ್ಲ. ಹೀಗಾಗಿ, ರಾಘವೇಂದ್ರ, ಹಾಗೂ ಅವರ ಸ್ನೇಹಿತರು ಮೊಳೆಗಳನ್ನು ಹಾಗೂ ಪಿನ್‌ಗಳನ್ನು ತೆರವುಗೊಳುಸುವ ಕಾರ್ಯವನ್ನು ತಮ್ಮ ಕರ್ತವ್ಯ ಎಂಬಂತೆ ಮಾಡುತ್ತಿದ್ದಾರೆ.

ಇದುವರೆಗೂ ಸುಮಾರು 600 ಮೊಳೆಗಳು ಹಾಗೂ 5,000 ಸ್ಟೆಪ್ಲರ್ ಪಿನ್‌ಗಳನ್ನು ತೆರವು ಗೊಳಿಸಿದ್ದಾರೆ. ಪ್ರತಿನಿತ್ಯ ಮುಂಜಾನೆ ಜಾಗಿಂಗ್ ಹೋಗುವ ಸಂದರ್ಭದಲ್ಲಿ ತಮ್ಮ ನಿತ್ಯದ ಕಾಯಕವನ್ನಾಗಿ ಈ ಕೆಲಸವನ್ನು ರಾಘವೇಂದ್ರ, ಹಾಗೂ ಅವರ ಸ್ನೇಹಿತರಾದ ಕಾರ್ತಿಕ್ ಮುದಲಿಯಾರ್, ಕಿರಣ್ ಕುಮಾರ್ ಮಾಡುತ್ತಾ ಬರುತ್ತಿದ್ದಾರೆ.

### ಪೋಸ್ಟರ್ ಅಳವಡಿಕೆ

ಮೊಳೆಗಳನ್ನು ಹಾಗೂ ಪಿನ್‌ಗಳನ್ನು ತೆರವುಗೊಳಿಸುವುದು ಮಾತ್ರವಲ್ಲದೆ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ನಡೆಸುತ್ತಿದ್ದಾರೆ. ‘ನಮಗೂ ಜೀವವಿದೆ, ನಮಗೂ ನೋವಾಗುತ್ತದೆ ಆದ್ದರಿಂದ ಮೊಳೆ ಹಾಗೂ ಪಿನ್‌ಗಳನ್ನು ಹೊಡೆಯಬೇಡಿ’ ಎಂಬ ಪೋಸ್ಟರ್‌ಗಳನ್ನು ಮರಗಳ ಸುತ್ತ ಹಾಕುವ ಮೂಲಕ ರಾಘವೇಂದ್ರ ಹಾಗೂ ಅವರ ಸ್ನೇಹಿತರು ಜನರಲ್ಲಿ ಮನವಿ ಮಾಡುತ್ತಿದ್ದಾರೆ.

| Date | 22-11-2020 |
|---|---|
| Page No | 1 |

# ಪರ್ಯಾಯ ಪೊಲೀಸರಾದ ಮಾರ್ಷಲ್‌ಗಳು

ಮಾರ್ಷಲ್‌ಗಳನ್ನು ನಗರದ ವ್ಯಾಪ್ತಿಯಲ್ಲಿ ಪರ್ಯಾಯ ಪೊಲೀಸರಂತೆ ಬಳಕೆ ಮಾಡಿಕೊಳ್ಳಲಾಗುತ್ತಿದ್ದು, ಸಂಚಾರಕ್ಕೆ ಅಡ್ಡಿಯಾಗುವಂತೆ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಅಂಗಡಿಗಳ ತೆರವಿಗೂ ಬಳಸಿಕೊಳ್ಳಲಾಗಿದೆ.

...ಪುಟ 2

## ಮಾರ್ಷಲ್‌ಗಳು

ಶಿವಾಜಿನಗರ ವಿಭಾಗದ ಭಾರತೀನಗರ ವಾರ್ಡ್ 91ರ ವ್ಯಾಪ್ತಿಯ ರಸಲ್ ಮಾರುಕಟ್ಟೆಯಲ್ಲಿ ಟೊಮೊಟೋ ವ್ಯಾಪಾರಿಗಳು ರಸ್ತೆಯನ್ನು ಆಕ್ರಮಿಸಿ ಕ್ರೇಟ್‌ಗಳನ್ನು ಇಟ್ಟಿದ್ದರು. ಇದರಿಂದ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿತ್ತು.

ಬಹಳ ದಿನಗಳಿಂದ ಈ ಸಮಸ್ಯೆ ಇತ್ತು. ವಾಹನ ಸವಾರರು ಸ್ಥಳೀಯ ವ್ಯಾಪಾರಿಗಳಿಗೆ ತಿಳುವಳಿಕೆ ಹೇಳಲು ಹೋದಾಗ ಸಂಘರ್ಷಗಳಾಗುತ್ತಿತ್ತು.

ಇಂದು ಬೆಳಗ್ಗೆ ಬಿಬಿಎಂಪಿ ಮಾರ್ಷಲ್‌ಗಳು ಸ್ಥಳಕ್ಕೆ ಬಂದು ವ್ಯಾಪಾರಿಗಳಿಗೆ ತಿಳುವಳಿಕೆ ಹೇಳಿದರು. ರಸ್ತೆಯ ಜಾಗವನ್ನು ಅತಿಕ್ರಮಿಸಿ ಸಂಚಾರಕ್ಕೆ ಅಡಚಣೆ ಮಾಡಿದರೆ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

ರಸ್ತೆ ಮಧ್ಯ ಭಾಗದವರೆಗೂ ಹಾಕಲಾಗಿದ್ದ ಕ್ರೇಟ್‌ಗಳನ್ನು ತೆರವುಗೊಳಿಸಿ ರಸ್ತೆ ಬದಿಗೆ ಹಾಕಿಸಿದ್ದಾರೆ. ಇದರಿಂದ ಸಂಚಾರ ವ್ಯವಸ್ಥೆ ಸುಗಮವಾಗಿದೆ.

ದಿನೇ ದಿನೇ ಬೆಂಗಳೂರಿನಲ್ಲಿ ಮಾರ್ಷಲ್‌ಗಳ ಕಾರ್ಯ ವ್ಯಾಪ್ತಿ ವಿಸ್ತರಣೆಯಾಗುತ್ತಿದೆ. ಕೊರೊನಾ ಸೋಂಕು ನಿಯಂತ್ರಿಸಲು ಸಾರ್ವಜನಿಕರ ನಡುವೆ ಸಾಮಾಜಿಕ ಅಂತರ ಕಾಪಾಡುವುದು, ಮಾಸ್ಕ್ ಧರಿಸುವುದನ್ನು ನಿಗಾ ವಹಿಸಲು ಬಿಬಿಎಂಪಿ ಹೆಚ್ಚುವರಿ ಮಾರ್ಷಲ್‌ಳನ್ನು ನೇಮಿಸಿಕೊಂಡಿತ್ತು.

ಹಂತ ಹಂತಾಗಿ ಮಾರ್ಷಲ್‌ಗಳನ್ನು ಕಸ ನಿರ್ವಹಣೆಯ ಕೆಲಸಕ್ಕೆ ನಿಯೋಜಿಸಲಾಗಿತ್ತು. ಸರಿಯಾಗಿ ಕಸ ವಿಂಗಡನೆ ಮಾಡದ ಸಾರ್ವಜನಿಕರಿಗೆ ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಮಾರ್ಷಲ್‌ಗಳು ದಂಡ ವಿಧಿಸಿದರು.

ರಸ್ತೆ ಬದಿಯಲ್ಲಿ ಕಸ ಎಸೆಯುವವರ ಮತ್ತು ಅನೈರ್ಮಲ್ಯ ಮಾಡುವವರ ವಿರುದ್ಧ ಮಾರ್ಷಲ್‌ಗಳು ದಂಡ ಪ್ರಯೋಗ ಮಾಡಿದರು. ಬಿತ್ತಿ ಪತ್ರ ಅಂಟಿಸಿ ನಗರದ ಸೌಂದರ್ಯ ಹಾಳು ಮಾಡುವವರ ವಿರುದ್ಧವೂ ಕಾರ್ಯಾಚರಣೆ ನಡೆಸಿದರು.

ಸಂಚಾರ ಸುವ್ಯವಸ್ಥೆ ಹಾಗೂ ಒತ್ತುವರಿ ತೆರವಿನಂತಹ ಕೆಲಸಗಳಿಗೂ ಈಗ ಮಾರ್ಷಲ್‌ಗಳನ್ನು ಇಳಿಸಲಾಗಿದೆ. ಇನ್ನು ಮುಂದೆ ಮತ್ತಷ್ಟು ಕೆಲಸಗಳಿಗೂ ಮಾರ್ಷಲ್‌ಗಳನ್ನು ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದ್ದು, ಪೊಲೀಸರ ಮೇಲಿದ್ದ ಕಾರ್ಯದೊತ್ತಡ ಕಡಿಮೆಯಾಗುವ ನಿರೀಕ್ಷೆಗಳಿವೆ.

ಈ ಸಂಜೆ

| Date | 22-11-2020 |
|---|---|
| Page No | 2 |

# ಮಂಗಳವಾರದಿಂದ ಮತ್ತೆ ಮಳೆ

**ಬೆಂಗಳೂರು, ನ.22-** ಕಳೆದ ಒಂದು ವಾರದಿಂದ ದುರ್ಬಲಗೊಂಡಿದ್ದ ಹಿಂಗಾರು ಮಳೆ ಮಂಗಳವಾರದಿಂದ ಮತ್ತೆ ಚೇತರಿಕೆಯಾಗುವ ಮುನ್ಸೂಚನೆಗಳಿವೆ.

ಮುಂಗಾರು ಹಂಗಾಮಿನ ವಿವಿಧ ಬೆಳೆಗಳ ಕೊಯ್ಲು ಸಂದರ್ಭದಲ್ಲಿ ಮಳೆ ಬರುವುದರಿಂದ ರೈತರಿಗೆ ಸಾಕಷ್ಟು ಹಾನಿ ಉಂಟಾಗಲಿದೆ. ಆದರೆ, ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿರುವ ಕಡ್ಲೆ, ಕೊತ್ತಂಬರಿ, ಹುರುಳಿ ಮತ್ತಿತರ ಬೆಳೆಗಳಿಗೆ ಅನುಕೂಲವಾಗಲಿದೆ.

ಬಂಗಾಳಕೊಲ್ಲಿಯಲ್ಲಿ ತೀವ್ರ ಸ್ವರೂಪದ ವಾಯುಭಾರ ಕುಸಿತ ಉಂಟಾಗಲಿದ್ದು, ನವೆಂಬರ್ 24ರಿಂದ 26ರ ವರೆಗೆ ಮೂರು ದಿನಗಳ ಕಾಲ ರಾಜ್ಯದಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆಗಳಿವೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿವೃತ್ತ ನಿರ್ದೇಶಕ ಡಾ.ಜಿ.ಎಸ್.ಶ್ರೀನಿವಾಸರೆಡ್ಡಿ ತಿಳಿಸಿದರು.

ಶ್ರೀಲಂಕಾ ಬಳಿ ಈಗಾಗಲೇ ವಾಯುಭಾರ ಕುಸಿತ ಉಂಟಾಗಿದ್ದು, ಇನ್ನೆರಡು ದಿನಗಳಲ್ಲಿ ಅದು ತೀವ್ರ ಸ್ವರೂಪ ತಾಳುವ ಸಾಧ್ಯತೆಗಳಿವೆ. ಆದರೆ, ಚಂಡಮಾರುತವಾಗಿ ಪರಿವರ್ತನೆಯಾಗುವ ಸಂಭವ ಕಡಿಮೆ ಇದೆ.

ತೀವ್ರ ಸ್ವರೂಪದ ವಾಯುಭಾರ ಕುಸಿತದ ಪರಿಣಾಮ ನವೆಂಬರ್ 24ರಂದು ರಾಜ್ಯದ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆ ಯಾಗುವ ಸಾಧ್ಯತೆಗಳಿವೆ ಎಂದು ಹೇಳಿದರು.

ನಾಳೆ ಸಂಜೆಯಿಂದಲೇ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದ್ದು, ಮಂಗಳವಾರ ಜಿಟಿ ಜಿಟಿ ಮಳೆಯಾಗಬಹುದು. ನವೆಂಬರ್ 25ರಂದು ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡು ಸೇರಿದಂತೆ ಹಲವು ಭಾಗಗಳಲ್ಲಿ ಮಳೆಯಾಗಲಿದೆ.

ಆದರೆ, ಕೆಲವು ಭಾಗಗಳಲ್ಲಿ ಭಾರೀ ಪ್ರಮಾಣದ ಮಳೆಯಾಗುವ ಮುನ್ಸೂಚನೆಗಳಿವೆ ಎಂದರು.

ಈಗಾಗಲೇ ಅರಬ್ಬಿ ಸಮುದ್ರದಲ್ಲಿ ಉಂಟಾಗಿದ್ದ ತೀವ್ರ ಸ್ವರೂಪದ ವಾಯುಭಾರ ಕುಸಿತ ಚಂಡಮಾರುತವಾಗಿ ಮಾರ್ಪಟ್ಟಿದೆ. ಆದರೆ, ಅದು ಓಮನ್ ಕಡೆ ಚಲಿಸುತ್ತಿರುವುದರಿಂದ ರಾಜ್ಯದ ಮೇಲೆ ಯಾವುದೇ ರೀತಿಯ ಪರಿಣಾಮ ಉಂಟಾಗುವುದಿಲ್ಲ. ಆದರೆ, ಅರಬ್ಬಿ ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ನವೆಂಬರ್ 24 ರಿಂದ 26ರ ವರೆಗೆ ಮೂರು ದಿನಗಳ ಕಾಲ ಮಳೆಯಾಗುವುದರಿಂದ ಮುಂಗಾರು ಹಂಗಾಮಿನ ರಾಗಿ, ಭತ್ತ, ಜೋಳ, ಹಲಸಂದೆ, ಉದ್ದು, ಹೆಸರು ಮೊದಲಾದ ಬೆಳೆಗಳ ಕೊಯ್ಲು ಮಾಡುತ್ತಿರುವ ರೈತರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಫಸಲನ್ನು ಸಂರಕ್ಷಣೆ ಮಾಡಿಕೊಳ್ಳುವುದು ಸೂಕ್ತ ಎಂದು ಅವರು ಸಲಹೆ ಮಾಡಿದ್ದಾರೆ.